ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 3, Nov-Dec, 2022, Pp. 134-147.**
**©*IIMRD*, Mysuru.**

IIMRD JOURNALS
**www.iimrd.com**

# 'ಅಹಲ್ಯೆ' ಕುರಿತ ಮೂರು ಕಾದಂಬರಿಗಳು

**ಡಾ. ಬಿ. ಎಸ್. ಸುದೀಪ್***

*ಸಹಾಯಕ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕನ್ನಡ ಸ್ನಾತಕೋತ್ತರ ವಿಭಾಗ, ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಊಟಿ ರಸ್ತೆ, ಮೈಸೂರು.

***ಸಾರಾಂಶ: (Abstract)***

*ಎಚ್.ಶಕುಂತಲಾಭಟ್ ಅವರ 'ಕಾಡಬೆಳದಿಂಗಳು' (1998), ಎಸ್.ವಿ. ಪ್ರಭಾವತಿ ಅವರ 'ಅಹಲ್ಯೆ' (1999), ಹೆಚ್.ಜಿ.ರಾಧಾದೇವಿಯವರ 'ಅಹಲ್ಯೆ' (2007) ಎಂಬ ಈ ಮೂರು ಕಾದಂಬರಿಗಳು ಭಾರತೀಯ ಪುರಾಣದಲ್ಲಿ ಬರುವ ಅಹಲ್ಯೆಯ ಬದುಕಿನ ಕಥೆಯನ್ನು ಕೇಂದ್ರೀಕರಿಸಿಕೊಂಡು ಸೃಜಿಸಿದ ಮಹಿಳಾ ಕಾದಂಬರಿಗಳಾಗಿವೆ. ಪ್ರಸ್ತುತ ಲೇಖನದಲ್ಲಿ ಈ ಕಾದಂಬರಿಗಳನ್ನು ವಿಶ್ಲೇಷಿಸಲಾಗಿದೆ.*

***ಮುಖ್ಯಪದಗಳು: (Keywords)*** *ಕಾದಂಬರಿ, ಅಹಲ್ಯ, ಕಾಡಬೆಳದಿಂಗಳು, ಕನ್ನಡ ಸಾಹಿತ್ಯ, ಮಹಿಳಾ ಸಾಹಿತ್ಯ*

## ಪೀಠಿಕೆ

ಭಾರತೀಯ ಪುರಾಣದಲ್ಲಿ ಬರುವ ಅಹಲ್ಯೆ ಪ್ರಾತಃ ಸ್ಮರಣೀಯರಾದ ಪಂಚ ಪತಿವ್ರತೆಯರಲ್ಲಿ ಒಬ್ಬಳು. ಶ್ರೇಷ್ಠ ಪಾಂಡಿತ್ಯ, ತಪಸ್ಸಿನ ಶಕ್ತಿಯನ್ನು ಹೊಂದಿರುವ ಗೌತಮನ ಪತ್ನಿ, ದೇವತೆಗಳ ಸೌಂದರ್ಯವನ್ನು ಮೀರಿಸುವ ಅಪ್ರತಿಮ ಸುಂದರಿ, ಬ್ರಹ್ಮನು ಸೃಷ್ಟಿಸಿದ ಮಹಿಳೆಯರಲ್ಲಿ ಅತ್ಯಂತ ಸುಂದರಿಯಾದವಳು, ಜೊತೆಗೆ ಮಹಾಪತಿವ್ರತೆಯೆಂದು ಪ್ರಸಿದ್ಧಳಾದವಳು. ಇಂದ್ರನಿಂದ ವಂಚಿತಳಾದವಳು, ಗಂಡನಿಗೆ ಮಾಡಿದ ದ್ರೋಹಕ್ಕಾಗಿ ಗಂಡನಿಂದ ಶಾಪಗ್ರಸ್ತಳಾದವಳು, ನಂತರ ರಾಮನಿಂದ ಶಾಪ ವಿಮೋಚನೆಗೊಂಡವಳು– ಈ ರೀತಿಯ ಅವಳ ಬದುಕಿನ ಪುರಾಣದ ಹಲವಾರು ಕಥೆಗಳನ್ನೇ ಈ ಮೂರು ಕಾದಂಬರಿಗಳು ಆಧರಿಸಿಕೊಂಡಿವೆ.

ಲೇಖಕಿಯರು ಶೋಷಿತ ಸ್ತ್ರೀಬದುಕಿನ ಬಹುಮುಖಗಳನ್ನು ತೋರಿಸುವ ನಿಟ್ಟಿನಲ್ಲಿ ಪುರಾಣದ ಘಟನೆ ಸಂಗತಿ ಪಾತ್ರಗಳ ಕಡೆ ಹೊರಳಿದ್ದು 1970ರ ದಶಕದಿಂದ ಪುರಾಣ ಮಹಿಳಾ ಬದುಕನ್ನು ಕೇಂದ್ರಿಕರಿಸಿಕೊಂಡು ಸೃಜನಾತ್ಮಕವಾಗಿ ಕಟ್ಟುವ ಮಹಿಳಾ ಸಾಹಿತ್ಯದ ಹಿಂದೆ ಪುರಾಣ ಭಂಜನೆಯ ಮೂಲಕ ಪುರಾಣ ಅಭಿವ್ಯಕ್ತಿಸಿರುವ ಪಿತೃ ಪ್ರಧಾನ ಸಂಸ್ಕೃತಿಯ ಕ್ರೌರ್ಯಗಳನ್ನು ಅನಾವರಣ ಮಾಡುವುದು ಮತ್ತು ಆ ಮೂಲಕ ಅವುಗಳೆಲ್ಲವನ್ನು ಮರುವಿಮರ್ಶಿಸುವುದು, ಪ್ರಶ್ನಿಸುವುದು, ಇಂದಿನ ಸಮಕಾಲೀನ ಬದುಕಿಗೂ ಆ ಕ್ರೌರ್ಯ, ಮೌಲ್ಯ ಮತ್ತು ಪುರುಷ ಪ್ರಧಾನ ಮನೋಭಾವದಿಂದ ಕೂಡಿರುವ ಜೀವನಶೈಲಿ ಸಾಗುತ್ತಾ

*Please cite this article as:* *ಡಾ. ಬಿ.ಎಸ್. ಸುದೀಪ್.* (2022). 'ಅಹಲ್ಯೆ' ಕುರಿತ ಮೂರು ಕಾದಂಬರಿಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(3). ಪು.ಸಂ. 134–147.*

ಬಂದಿರುವ ಬಗೆಗಳನ್ನು ತೋರಿ ಎಚ್ಚರಿಸುವ ಉದ್ದೇಶವನ್ನು ಹೊಂದಿವೆ. ಪುರಾಣಗಳು ಕಟ್ಟಿ ಕೊಡುವ ಸ್ತ್ರೀ ಬದುಕಿನ ಆಲೋಚನೆ ಮನೋಭಾವಗಳನ್ನು ಭಂಜಿಸಿ ಮಹಿಳಾ ಬದುಕಿಗೆ ಸಂಬಂಧಿಸಿದ ನವ ಪುರಾಣಗಳನ್ನು ಮತ್ತು ಲಿಂಗ ಸಮಾನತೆಯ ಬದುಕನ್ನು ಸೃಜನಾತ್ಮಕವಾಗಿ ಹೇಳುವ ಸಂದರ್ಭದಲ್ಲಿ ಲೇಖಕಿಯರಿಗೆ ಸವಾಲು ಸಹಜವಾಗಿ ಎದುರಾಗುತ್ತವೆ. ಆ ಮೂಲಕ ಲೇಖಕಿಯರು ಹೇಳುವ ಸ್ತ್ರೀವಾದದ ಸ್ವರೂಪ ಮತ್ತು ತಾತ್ವಿಕತೆಯನ್ನು ಗ್ರಹಿಸಿದರೆ, ಇದು ಮತ್ತೊಂದು ರೀತಿಯಲ್ಲಿ ಪಾಶ್ಚಾತ್ಯ ಮತ್ತು ಭಾರತೀಯ ಸ್ತ್ರೀವಾದವನ್ನು ಕನ್ನಡ ಲೇಖಕಿಯರು ಹೇಗೆ ಗ್ರಹಿಸಿದ್ದಾರೆ ಎಂಬುದನ್ನು ತಿಳಿಸಿಕೊಡುತ್ತದೆ.

ಎಚ್. ಶಕುಂತಳಾ ಭಟ್ ಅವರ 'ಕಾಡಬೆಳದಿಂಗಳು' ಕಾದಂಬರಿ 'ಸತಿಧರ್ಮದಂತೆ ಪತಿಧರ್ಮವೂ' ಇದೆ ಎಂಬ ತಾತ್ವಿಕತೆಯನ್ನು ಹೇಳಲು ಹೊರಟಿದೆ. ಹೆಣ್ಣನ್ನು ತನ್ನ ನಿಯಂತ್ರಣದಲ್ಲಿರಿಸಿಕೊಳ್ಳಲು ಪಿತೃಪ್ರಧಾನ ವ್ಯವಸ್ಥೆ ರೂಪಿಸಿದ ಹಲವು ತಂತ್ರಗಳಲ್ಲಿ 'ಸತಿಧರ್ಮ' ಎಂಬ ಕಲ್ಪನೆ ಕೂಡ ಒಂದು. ಅದನ್ನು ಕೇಂದ್ರೀಕರಿಸಿಕೊಂಡು ಅಹಲ್ಯೆಯ ಬದುಕನ್ನು ನಿರೂಪಿಸುವ ಕಾದಂಬರಿಗಾರ್ತಿ ಸತಿಧರ್ಮದಂತೆ ಪತಿಧರ್ಮ ಎಂಬುದು ನಮ್ಮ ಕುಟುಂಬ ವ್ಯವಸ್ಥೆ ಮತ್ತು ಸಾಮಾಜಿಕ ವ್ಯವಸ್ಥೆಗೆ ಬೇಕು ಎಂದು ಆಶಿಸುತ್ತಾರೆ. ಪತಿಧರ್ಮವನ್ನು ಮರೆತ ಗೌತಮನೇ ಅಹಲ್ಯೆಯ ಹಲವು ಸಂಕಟಗಳಿಗೆ ಕಾರಣವೆಂಬುದನ್ನು ಕಾದಂಬರಿಗಾರ್ತಿ ಬಿಂಬಿಸುತ್ತಾರೆ. ಇವುಗಳೊಂದಿಗೆ ಧರ್ಮ ಮತ್ತು ಮಹಿಳೆಯ ಸಂಬಂಧದ ಸೂಕ್ಷ್ಮ ಚರ್ಚೆಗಳನ್ನು ಕಾದಂಬರಿಯಲ್ಲಿ ಸಂದರ್ಭಾನುಸಾರ ತಂದು ಪುರುಷ ಪ್ರಧಾನತೆ ರೂಪಿಸಿದ ಧರ್ಮ ಎಂಬ ಸಾಮಾಜಿಕ ಸಂಸ್ಥೆ ಹೆಣ್ಣನ್ನು ಶೋಷಿಸುತ್ತಿರುವ ನೆಲೆಗಳನ್ನು ಚಿತ್ರಿಸುತ್ತಾ ಇಂದಿಗೂ ಈ ಧರ್ಮದ ಹುನ್ನಾರ ತಂತ್ರಗಳ ಮಧ್ಯೆ ಹೆಣ್ಣು ಬಂಧಿತಳಾಗಿರುವ ಸ್ವರೂಪಗಳನ್ನು ಅರ್ಥೈಸುವ ಪ್ರಯತ್ನ ಮಾಡಿದ್ದಾರೆ. ಪುರುಷ ನಿರ್ಮಿತವಾದ ನಿಯಮ ಕಟ್ಟಪ್ಪಣೆಗಳನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಪ್ರಶ್ನಿಸುತ್ತಾರೆ. ಶತಮಾನದಿಂದಲೂ ಹೆಣ್ಣಿನ ಆಸೆ ಆಕಾಂಕ್ಷೆಗಳೆಲ್ಲವನ್ನೂ ಪುರುಷ ಪರಿಗಣಿಸಿಲ್ಲದಿರುವ ಸಂಗತಿಗಳನ್ನು ಸೃಜನಾತ್ಮಕವಾಗಿ ಕಟ್ಟಿಕೊಟ್ಟಿದ್ದಾರೆ.

ಕಾದಂಬರಿಯ ಆರಂಭದಲ್ಲಿ ಅಹಲ್ಯೆಯ ಏಕಾಂತದ/ಏಕಾಂಗಿತನದ ಬದುಕನ್ನು ಚಿತ್ರಿಸುತ್ತಾ, ಒಂದು ಸಾಮಾನ್ಯ ಹೆಣ್ಣಿನ ಸಹಜ ಬಯಕೆಗಳಂತೆ ಅಹಲ್ಯೆಯ ಬಯಕೆಗಳಿವೆ ಎಂಬುದನ್ನು ಹೇಳುತ್ತಾರೆ. ಗೌತಮನ ಆಶ್ರಮದಲ್ಲಿ ವಿರಹದ ವೇದನೆಯಲ್ಲಿರುವ ಅಹಲ್ಯೆಯ ಸ್ಥಿತಿ ಮತ್ತು ಅದಕ್ಕೆ ಕಾರಣವಾದ ಗೌತಮನ ವ್ಯಕ್ತಿತ್ವವನ್ನು ತಿಳಿಸುತ್ತಾ, ಜೊತೆಜೊತೆಯಲ್ಲಿ ಅಹಲ್ಯೆಯ ಬದುಕಿನ ಹಂತ ಹಂತಗಳನ್ನು ತೆರೆದಿಡುತ್ತಾರೆ. ಗೌತಮ ಋಷಿ ಸಿಂಧೂ ದೇಶದ ಕಡೆ ಯಾಗ ಯಜ್ಞಕ್ಕಾಗಿ ಹೋದವನು ಇನ್ನೂ ಬಂದಿಲ್ಲ. ಈ ಸಂದರ್ಭದಲ್ಲಿ ವಿರಹದಲ್ಲಿ ಬೇಯುತ್ತಿರುವ ರೂಪಸಿ ಅಹಲ್ಯೆ ತನ್ನ ಸ್ಥಿತಿ, ತನ್ನ ಕುಟುಂಬ, ತನ್ನ ದಾಂಪತ್ಯದ ಬದುಕು ಇವುಗಳೆಲ್ಲವನ್ನೂ ಸ್ವಗತದ ಮಾದರಿಯಲ್ಲಿ ನೆನಪು ಮಾಡಿಕೊಳ್ಳುತ್ತಾ ತನಗೆ ಪ್ರಾಪ್ತವಾಗಿರುವ ಸ್ಥಿತಿಯನ್ನು ಕುರಿತು ಚಿಂತಿಸುತ್ತಾಳೆ.

ಗಂಡದೆಯ ಹೆಣ್ಣು, ಧೈರ್ಯಶಾಲಿ ಎಂದೆಲ್ಲಾ ಬಾಲ್ಯದಲ್ಲಿ ಗುರುತಿಸಿಕೊಂಡಿದ್ದ ಅಹಲ್ಯೆಯ ವಿವಾಹಪೂರ್ವ ಬದುಕಿನ ಚಿತ್ರಣವನ್ನು ಈ ಕಾದಂಬರಿಗಾರ್ತಿ ಕೊಡುತ್ತಾರೆ. ಹಾಗೆ ಇದ್ದ ಅಹಲ್ಯೆ ಇಂದು ಗೌತಮನ ಆಶ್ರಮದಲ್ಲಿ ನಾರುಮಡಿಯನ್ನು ತೊಟ್ಟ ಅಹಲ್ಯೆಯಾಗಿದ್ದಾಳೆ. ಬಾಲ್ಯದಲ್ಲಿ ಸಾಹಸಮಯವಾದ ಆಟ ಓಡಾಟ, ಮಾಧವನೊಂದಿಗಿನ ಗೆಳೆತನ, ಅವನು ಇವಳಿಗೆ ಗಂಡೆದೆಯ ಹೆಣ್ಣು ಎಂಬ ಬಿರುದುನ್ನು

ನೀಡಿದ್ದು, ನಂತರ ಈಕೆಯ ಮದುವೆಯ ಸುದ್ದಿ ತಿಳಿದು ಊರೇ ಬಿಟ್ಟವನು ಇಂದಿಗೂ ಸಿಕ್ಕದೆ ಇರುವುದು ಇಂತಹ ಸಂಗತಿಗಳನ್ನು ನೆನಪು ಮಾಡಿಕೊಳ್ಳುವ ಅಹಲ್ಯೆಯ ವ್ಯಕ್ತಿತ್ವವು ವಿಭಿನ್ನ ಪರಿಸರಗಳಲ್ಲಿ ವಿಭಿನ್ನ ಅನುಭವಗಳನ್ನು ಅನುಭವಿಸಿರುವುದಕ್ಕೆ ಪೂರಕ ಸಾಕ್ಷಿಯಂತೆ ಇದೆ. ಆದರೆ ವಿವಾಹದ ನಂತರ ಅವಳು ಬಂಧಿಯಾಗಿರುವ ಬದುಕನ್ನು ಕಾದಂಬರಿಗಾರ್ತಿ ಚಿತ್ರಿಸುತ್ತಾರೆ. ಹೆಣ್ಣಿಗೆ ಕೆಲವು ಸಲ ವಿವಾಹ ಪೂರ್ವದಲ್ಲಿದ್ದಷ್ಟು ಸ್ವಾತಂತ್ರ್ಯ ಸಂತೋಷ ವಿವಾಹದ ನಂತರದಲ್ಲಿ ಇಲ್ಲದೆ ಹೋಗುವ ಸಂಗತಿಯನ್ನು ಇದು ನೆನಪಿಸಿ ಪುರುಷ ಪ್ರಧಾನ ವ್ಯವಸ್ಥೆಯು ರೂಪಿಸಿರುವ ವಿವಾಹ ಎಂಬ ಸಾಮಾಜಿಕ ಸಂಸ್ಥೆಯ ಮನೋಧರ್ಮಗಳನ್ನು ವಿಮರ್ಶಿಸುತ್ತದೆ.

ವಾರಣಾಸಿಯ ಧಾರ್ಮಿಕ ಸಮ್ಮೇಳನದಲ್ಲಿ ಗೌತಮ ನೀಡುವ ಉಪನ್ಯಾಸದ ದೃಶ್ಯವೊಂದನ್ನು ಕಾದಂಬರಿಯಲ್ಲಿ ತಂದು ಈ ಮೂಲಕ ವೈದಿಕರ ಪುರಾಣ ಸಂಗತಿಗಳನ್ನು, ಅವರು ಬಿಂಬಿಸಿದ ಜ್ಞಾನದ ಪರಿಕಲ್ಪನೆಯನ್ನು, ವೇದ ಉಪನಿಷತ್ತುಗಳ ವಿಚಾರಧಾರೆಯನ್ನು ಸ್ತ್ರೀದೃಷ್ಟಿಕೋನದಿಂದ ವಿಮರ್ಶಿಸಿ ಪುನರ್ ವ್ಯಾಖ್ಯಾನ ಮಾಡುವ ಪ್ರಯತ್ನ ಮಾಡಿದ್ದಾರೆ. ಉಪನ್ಯಾಸದ ಮಧ್ಯದಲ್ಲಿ ನಾಸ್ತಿಕನೊಬ್ಬ ಕೇಳಿದ ಪ್ರಶ್ನೆ– 'ನಾಸ್ತಿ ಕಾಮಸಮೋ ವ್ಯಾಧಿ' ಎಂಬುದು. (ಅಂದರೆ ಕಾಮವನ್ನು ವ್ಯಾಧಿಗೆ ಹೋಲಿಸಿರುವುದು ಸರಿಯೇ?) ಈ ಪ್ರಶ್ನೆಗೆ ಗೌತಮ ಪುರಾಣಗಳಿಂದಲೇ ಹಲವು ಉದಾಹರಣೆಗಳೊಂದಿಗೆ ನೀಡುವ ಉತ್ತರ 'ಮಾನವನ ಏಳಿಗೆಗೆ ಕಾಮವೆಂಬುದು ಸಲ್ಲದು',... ಯಾರಿಗಾದರೂ ವಂಶಾಭಿವೃದ್ಧಿಗಾಗಿ ಗೃಹಸ್ಥಾಶ್ರಮ ಬೇಕೆಬೇಕು. ಅದೂ ತಮ್ಮ ಬದುಕಿನ ಅಲ್ಪ ಭಾಗವನ್ನು ಮಾತ್ರ ಗೃಹಸ್ಥಾಶ್ರಮಕ್ಕೆ ಮೀಸಲಾಗಿರಿಸಿ ನಂತರ ಸಪತ್ನೀಕನಾಗಿ ಅಸಿಧಾರಾವ್ರತವನ್ನು ಹಿಡಿಯಬೇಕು.'[1] ಹೀಗೆ ಹಲವು ತರದ ಪ್ರಶ್ನೆ ಉತ್ತರಗಳಲ್ಲಿ ಪುರುಷನ ಜ್ಞಾನ ಸ್ತ್ರೀಯನ್ನು ಶೋಷಿಸುತ್ತಿರುವ ಬಗೆಯನ್ನು ಸೂಕ್ಷ್ಮವಾಗಿ ಬಿಂಬಿಸುತ್ತಾರೆ. ಈ ಸಂದರ್ಭದಲ್ಲಿಯೇ ಗೌತಮನಿಗೆ ತನ್ನ ಪತಿಧರ್ಮವೇನೆಂಬ ಪ್ರಶ್ನೆ ಮನಸ್ಸಿನಲ್ಲಿ ಮೂಡಿ "ಗೌತಮ, ನಿನ್ನ ಕೈ ಹಿಡಿದ ನತದೃಷ್ಟಳಿಗೆ ನೀನು ಯಾವ ಸ್ಥಾನಮಾನ ನೀಡಿರುವೆ? ಮನೆಗೆ ಮಾರಿ, ಪರರಿಗೆ ಉಪಕಾರಿ ಎಂಬಂತೆ ನೀನು ಲೋಕಕ್ಕೆ ಉಪದೇಶ ಮಾಡಲು ಹೊರಟಿರುವೆ. ನಿನ್ನ ನಡತೆಗೆ ಧಿಕ್ಕಾರ, ಧಿಕ್ಕಾರವೆಂದು ಅವನ ಅಂತರಾಳ ಪ್ರಶ್ನಿಸುತ್ತಿರುವಾಗಲೆಲ್ಲ ಗೌತಮ ಉತ್ತರ ನೀಡಲು ತಡವರಿಸುತ್ತಿದ್ದ. ಆ ಮಾನಸಿಕ ವೇದನೆ, ಆ ಕ್ಷಣ ಮಾತ್ರ. ಮತ್ತೊಂದು ಕ್ಷಣ ಅವನ ಮನಸ್ಸು ನಾಯಿ ಬಾಲದಂತೆ. ಕೈ ಹಿಡಿದ ತಪ್ಪಿಗೆ ಆಕೆಗೆ ಏನು ಕಡಿಮೆ ಮಾಡಿರುವೆ ಎಂದುಕೊಂಡು ತನಗೆ ತಾನೇ ಸಮಾಧಾನಪಡಿಸಿಕೊಳ್ಳುತ್ತಿದ್ದ."[2] ತನ್ನ ಪತಿಧರ್ಮದ ಬಗೆಗೆ ಎಚ್ಚೆತ್ತುಕೊಳ್ಳುವ ಸಾಧ್ಯತೆಗಳಿದ್ದರೂ ಗೌತಮ ಎಚ್ಚೆತ್ತುಕೊಳ್ಳುವುದಿಲ್ಲ. ಇದು ಬಹುತೇಕ ಪುರುಷರ ಮನೋಭಾವವನ್ನು ಬಿಂಬಿಸುತ್ತದೆ.

ಇದರೊಂದಿಗೆ ಅಹಲ್ಯೆಯ ಬಾಲ್ಯದ ಗೆಳತಿ ತಿತ್ತರಿ ಮತ್ತು ಆಕೆಯ ತಾಯಿ ಕಾರ್ವಿಯರು ಪುಲಸ್ತ್ಯ ಋಷಿಯ ಆಶ್ರಮದಲ್ಲಿ ಮತ್ತು ಹೊರಗಿನ ಸಮಾಜದಲ್ಲಿ ಲೈಂಗಿಕವಾಗಿ ಶೋಷಿತವಾದ ಕಥೆ ಇದೆ. ಹೆಣ್ಣಿನ ಅಸಹಾಯಕತೆಯನ್ನು ಲೈಂಗಿಕವಾಗಿ ಉಪಯೋಗಿಸಿಕೊಳ್ಳುವ ಪುರುಷ ಪ್ರಧಾನ ಸಮಾಜದ ದೃಷ್ಟಿಕೋನ, ಹೆಣ್ಣನ್ನು ಭೋಗದ ವಸ್ತುವಾಗಿ ಋಷಿ ಕಂಡ ಕಥೆಯನ್ನು ನಿರೂಪಿಸುತ್ತಾರೆ. ಇಷ್ಟೆಲ್ಲಾ ಮಾಡಿದರೂ ಪುರುಷ ಎಂಬ ಪ್ರಾಣಿ ಲೋಕದ ಕಣ್ಣಿಗೆ ಮರ್ಯಾದಾಪುರುಷೋತ್ತಮನಾಗಿ ಕಾಣುವ ಬಗೆಯನ್ನು ಚಿತ್ರಿಸಿ ಪ್ರಶ್ನಿಸುತ್ತಾರೆ. ಹೆಣ್ಣನ್ನು ಲೈಂಗಿಕವಾಗಿ ಭೋಗಿಸುವಾಗ ಧರ್ಮದಲ್ಲಿನ ನೀತಿ ನಿಯಮಗಳು ನೆನಪಾಗದ

ವಿಪರ್ಯಾಸವನ್ನು ವಿಮರ್ಶಿಸುತ್ತಾರೆ. ತಿತ್ತರಿ ಮತ್ತು ಆಕೆಯ ತಾಯಿ ಕಾರ್ವಿಯರು ಬಡತನದಿಂದ ಪುರುಷ ಸಮಾಜದಲ್ಲಿ ಲೈಂಗಿಕವಾಗಿ ಶೋಷಣೆಗೆ ಒಳಗಾದರೆ, ಅಹಲ್ಯೆ ಬಡತನವಿಲ್ಲದೆ ಶ್ರೀಮಂತಿಕೆಯಿದ್ದರೂ ಧಾರ್ಮಿಕ ನೆಲೆಯಲ್ಲಿ ಲೈಂಗಿಕವಾಗಿ ಶೋಷಣೆಗೆ ಒಳಗಾಗುತ್ತಾಳೆ ಎಂಬುದನ್ನು ಇಲ್ಲಿ ಚಿತ್ರಿಸುವ ಪ್ರಯತ್ನ ಮಾಡಿದ್ದಾರೆ ಲೇಖಕಿ. ಇದರರ್ಥ ಹೆಣ್ಣು ಸಾಮಾಜಿಕ, ರಾಜಕೀಯ, ಧಾರ್ಮಿಕ, ಆರ್ಥಿಕ ನೆಲೆಗಳಲ್ಲಿ ಲೈಂಗಿಕ ಶೋಷಣೆಗೆ ಸದಾ ಒಳಗಾಗುತ್ತಾ ಇರುತ್ತಾಳೆ ಎಂಬುದನ್ನು ಹೇಳುವ ಪ್ರಯತ್ನ ಲೇಖಕಿಯರದು.

ಗೌತಮರ ಆಶ್ರಮಕ್ಕೆ ಅವರನ್ನು ನೋಡಲು ಬರುವ ಉತ್ಪಲ ಮತ್ತು ಭಗವತೀ ದಂಪತಿಗಳ ಕಥೆಯೊಂದು ಕಾದಂಬರಿಯಲ್ಲಿ ಬರುವುದು. ಈ ಪಾತ್ರಗಳ ಮೂಲಕ ಸತಿಪತಿಗಳ ಅನ್ಯೂನತೆಯನ್ನು ತೋರಿಸುವ ಪ್ರಯತ್ನವನ್ನು ಕಾದಂಬರಿಗಾರ್ತಿ ಮಾಡಿದ್ದಾರೆ. ಗೌತಮರನ್ನು ನೋಡಲು ಬಂದ ಈ ದಂಪತಿಗಳಲ್ಲಿ ಹೆಂಡತಿ ಉತ್ಪಲಗೆ ಅನಾರೋಗ್ಯವಿದ್ದ ಕಾರಣ ಆಶ್ರಮದಲ್ಲಿಯೆ ಉಳಿಯುವ ಪ್ರಸಂಗ ಬರುತ್ತದೆ. ಈ ಸಂದರ್ಭದಲ್ಲಿ ಅವರ ದಾಂಪತ್ಯದ ಭಾಂದವ್ಯವನ್ನು ನೋಡುವ ಅಹಲ್ಯೆ ತನ್ನ ಗೌತಮ ನನ್ನೊಂದಿಗೆ ಹೀಗೇಕೆ ಇಲ್ಲವೆಂದು ಚಿಂತಿಸುತ್ತಾಳೆ. ಅವಳಲ್ಲಿ ಸ್ತ್ರೀ ಸಹಜ ಬಯಕೆಗಳು ಆ ಸಂದರ್ಭದಲ್ಲಿ ಮೂಡುತ್ತವೆ.

ಗೌತಮ–ಅಹಲ್ಯೆಯರ ಕಥೆಯಲ್ಲಿ ಇಂದ್ರನದು ಪ್ರಮುಖಪಾತ್ರ. ಸ್ತ್ರೀಯರೆಂದರೆ, ಭೋಗ ವಸ್ತುಗಳೆಂಬ ನಿಕೃಷ್ಠ ಭಾವನೆಯನು ಹೊಂದಿರುವ ಇಂದ್ರನ ವ್ಯಕ್ತಿತ್ವದ ಚಿತ್ರಣದಲ್ಲಿ ಯಾವ ಹೊಸ ಬದಲಾವಣೆಗಳಿಲ್ಲ. ಹಲವು ದೇವತಾ ಸ್ತ್ರೀಯರನ್ನು ಭೋಗಿಸಿದರು ಅಹಲ್ಯೆಯನ್ನು ಭೋಗಿಸುವ ಉತ್ಕಟ ಬಯಕೆ ಇಂದ್ರನದು. ಈ ಕಾರ್ಯತಂತ್ರ ಸಾಧಿಸಿಕೊಳ್ಳುವುದಕ್ಕೆ ಗೌತಮನ ವೇಷಧರಿಸಿ ಅಹಲ್ಯೆಯನ್ನು ಭೋಗಿಸುತ್ತಾನೆ. ಈ ಕುತಂತ್ರ ತಿಳಿಯದೆ ಮೋಸ ಹೋದ ಅಹಲ್ಯೆ "ದೇಹವೆಲ್ಲಾ ಸಹಸ್ರಾಕ್ಷವಾಗಲಿ. ನಿನ್ನಂತಹ ಕಾಮುಕರಿಗೆ ಅವು ಕಣ್ಣಾಗಲಿ. ಹುಣ್ಣಾಗಲಿ. ರಸಿಕೆ ಸೋರಲಿ.ಅತಿರತಿ ಚಾಪಲ್ಯವುಳ್ಳ ನಿನ್ನಂಥವರು ಗುಣಪಡಿಸದ ವಿಚಿತ್ರ ರೋಗದಿಂದ ನರಳಿ ಸಾಯಲಿ"[3] ಎಂದು ಶಾಪವನ್ನು ನೀಡುತ್ತಾಳೆ.

"ದಾಂಪತ್ಯ ಜೀವನ ಪರಿಪಕ್ವ ಆಗಬೇಕಿದ್ದರೆ, ಸತಿ ಪತಿ ಪರಸ್ಪರ ಅರಿತು ಬಾಳಬೇಕು. ಅವಳಿಗೂ ಗೌರವ ಕೊಡಬೇಕು"[4] ಎಂದು ಮನಪರಿವರ್ತಿತನಾಗಿ ಹೊಸ ಮನುಷ್ಯನಾಗಿ ಆಶ್ರಮಕ್ಕೆ ಬಂದ ಗೌತಮನಿಗೆ ಇಂದ್ರ ಮತ್ತು ಅಹಲ್ಯೆಯರ ನಡುವೆ ನಡೆದ ವಿಷಯ ತಿಳಿದು ಇಂದ್ರನಿಗೆ "ನಿನ್ನ ಮುಖ ದರ್ಶನ ಮಾಡಿದವರಿಗೆ ರೌರವ ನರಕ ಪ್ರಾಪ್ತವಾಗಬಹುದು. ಇನ್ನು ಮುಂದಕ್ಕೆ ನಿನ್ನಂಥವರಿಗೆ ಯಜ್ಞ, ಯಾಗದಲ್ಲಿ ಹವಿರ್ಭಾಗ ಸಿಗಕೂಡದು"[5] ಎಂದು ಶಾಪವನ್ನು ನೀಡುತ್ತಾನೆ. ಮೋಸ ಹೋದ ಅಹಲ್ಯೆಯನ್ನು ದೂರುತ್ತಾ ಇದಕ್ಕೆ ಕಾರಣಗಳನ್ನು ಕೇಳುವಾಗ ಅವರಿಬ್ಬರ ಮಧ್ಯೆ ನಡೆಯುವ ಸಂವಾದದಲ್ಲಿ ಪತಿಧರ್ಮದ ಬಗ್ಗೆ ಅಹಲ್ಯೆ ಗೌತಮನಿಗೆ ತಿಳಿಸಿ ಎಚ್ಚರಿಸುತ್ತಾಳೆ. "...ನಿನಗಿಂತಲೂ ಚೆನ್ನಾಗಿ ಸತಿಧರ್ಮವೇನೆಂದು ನಾನು ಅರಿತಿರುವೆ. ನನಗಿಂತ ಗೋಶಾಲೆಯಲ್ಲಿ ಕಟ್ಟಿಹಾಕುವ ಕಪಿಲೆ ಸಾವಿರ ಪಾಲು ಮೇಲು. ಮೈಮನಕ್ಕೆ ಹುಚ್ಚು ಹಿಡಿದಾಗ ಕೂಗುತ್ತಾಳೆ, ಕುಣಿಯುತ್ತಾಳೆ. ಆದರೆ ನಾನು.. ನಾನು.. ... ಇಲ್ಲಿರುವ ಪ್ರತಿಯೊಂದು ನಿರ್ಜೀವ ವಸ್ತುಗಳೂ ನನ್ನ ನೋವಿಗೆ ಸ್ಪಂದಿಸಿವೆ. ಯಾಕೆಂದರೆ ನಾನು ಮೂಕಿಯಾಗುವೆನೆಂಬ ಭಯದಿಂದ ದಿನವೆಲ್ಲಾ ಅವುಗಳೊಂದಿಗೆ ಮಾತನಾಡುತ್ತಿರುವೆ. ಗೌತಮ ತಾಳೆಗರಿಯಲ್ಲಿ ಬರೆದು, ಓದಿ ಮಹಾಜ್ಞಾನಿಯಾಗಿದ್ದರೆ ಸಾಲದು. ಸಂಸಾರದಲ್ಲಿ ಈಜಾಡಿದ ಅನುಭವ ವ್ಯಾವಹಾರಿಕ ಜ್ಞಾನವು ಇರಬೇಕು. ನನ್ನ ಬಾಳನ್ನೆ

ಆಪೋಶನಗೊಂಡ ನೀನು ಕೊಲೆಪಾತಕ"[6] ಎಂದು ಎಚ್ಚರಿಸುತ್ತಾ ಅಹಲ್ಯೆ ತನ್ನ ಸ್ಥಿತಿಗೆ ಗೌತಮನೇ ಕಾರಣವೆಂದು ಆರೋಪಿಸಿ ಮನದಟ್ಟು ಮಾಡುತ್ತಾಳೆ.

ಕಾದಂಬರಿಯ ಕೊನೆಯಲ್ಲಿ ಅಹಲ್ಯೆ ಮತ್ತು ಗೌತಮರ ನಡುವಿನ ಸಂಭಾಷಣೆಯಲ್ಲಿ, ಅಹಲ್ಯೆ ತನ್ನ ಸ್ಥಿತಿಗೆ ಗೌತಮ (ಅಥವಾ ಈ ಪುರುಷ ಪ್ರಧಾನ ವ್ಯವಸ್ಥೆಯ ಮನೋಧರ್ಮಗಳು) ಕಾರಣವಾದ ರೀತಿಯನ್ನು ವಿವರಿಸುತ್ತಾಳೆ. "ಸಮಾನ ಆಸಕ್ತಿ, ವ್ಯಸನಗಳಿದ್ದರೂ, ಲೋಕದಲ್ಲಿ ಗಂಡು–ಹೆಣ್ಣಿಗೆ ದ್ವಿಧೋರಣೆ ನ್ಯಾಯ! ಒಂದು ಕಣ್ಣಿಗೆ ಬೆಣ್ಣೆ, ಇನ್ನೊಂದು ಕಣ್ಣಿಗೆ ಸುಣ್ಣ! ಸಮಾಜ ಅವರಿಬ್ಬರನ್ನೂ ಸಮಾನ ದೃಷ್ಟಿಯಿಂದ ನೋಡುವವರೆಗೂ ಹೆಣ್ಣಿನ ಶೋಷಣೆಗೆ ಮುಕ್ತಿ ಇಲ್ಲ"[7]ಎಂದು ನುಡಿದ ಅಹಲ್ಯೆ ಲಿಂಗ ಸಮಾನತೆಯ ತತ್ವವನ್ನು ಬಯಸುತ್ತಾಳೆ. ಕೋಪಗೊಂಡ ಗೌತಮ "ಅಹಲ್ಯಾ, ನನ್ನನ್ನು ನಿಂದಿಸುವ ನಿನ್ನ ನಾಲಿಗೆ, ಕೈಕಾಲು ದೇಹ ಎಲ್ಲ ಮರಗಟ್ಟಲಿ…"[8] ಎಂದು ಶಾಪ ನೀಡುತ್ತಾನೆ. ಅದಕ್ಕೆ ಪ್ರತಿಕ್ರಿಯಿಸುವ ಅಹಲ್ಯೆ, ನನಗೂ ಇದೇ ಬೇಕಾಗಿದ್ದು ಎನ್ನುತ್ತಾ ಒಂದು ಕೋರಿಕೆಯನ್ನು ದುಃಖ ಕೋಪದಿಂದ ಮುಂದಿಡುತ್ತಾಳೆ– "ಸತಿಯನ್ನು ಅರ್ಥೈಸಿಕೊಳ್ಳದ ಪತಿ ಇನ್ನು ಮುಂದಕ್ಕಾದರೂ ವೈವಾಹಿಕ ಬಂಧನಕ್ಕೆ ಸಿಲುಕಬಾರದು"[9] ಎಂದು ಹೇಳುತ್ತಾಳೆ. ಇದೇ ಕಾದಂಬರಿಗಾರ್ತಿಯರ ಪ್ರಮುಖ ತಾತ್ವಿಕತೆಯಾಗಿದೆ.

ಎಸ್.ವಿ. ಪ್ರಭಾವತಿ ಅವರ 'ಅಹಲ್ಯೆ' ಮೌನವಾಗಿಲ್ಲ. ಮೌನ ಮುರಿದು ಮಾತನಾಡುವ, ಪ್ರಶ್ನಿಸುವ, ನಿರ್ಬಂಧಗಳನ್ನು ಮುರಿಯುವ ಅಹಲ್ಯೆಯಾಗಿದ್ದಾಳೆ. ಮೌನವನ್ನು ಮುರಿಯುವುದೇ ಪ್ರಭಾವತಿ ಅವರು ಚಿತ್ರಿಸುವ 'ಅಹಲ್ಯೆ' ವ್ಯಕ್ತಿತ್ವದ ವಿಶೇಷ. ಪುರುಷನ ಮನೋಭಾವ ಮತ್ತು ಕನಸುಗಳು ಸ್ತ್ರೀಬದುಕಿನ ಮೇಲೆ ನಿಯಂತ್ರಣವನ್ನು ಹೇರಿರುವ ಬಗೆಯನ್ನು ಇದರಲ್ಲಿ ಚಿತ್ರಿಸುತ್ತಾ ಹೋಗುತ್ತಾರೆ. ಪುರುಷ ಜಗತ್ತಿನಲ್ಲಿ ಹೆಣ್ಣಿಗೆ ಸ್ವಾತಂತ್ರ್ಯವೇ ಇಲ್ಲದ, ಅಸ್ತಿತ್ವವೇ ಇಲ್ಲದ ಚಿತ್ರಣ ಕಾದಂಬರಿಯುದ್ದಕ್ಕೂ ಇದೆ. ಹೆಣ್ಣಿನ ಆಸೆ–ಕನಸುಗಳು ಪುರುಷ ಜಗತ್ತಿನಲ್ಲಿ ನುಚ್ಚು ನೂರಾಗುವ ಸಂದರ್ಭಗಳನ್ನು ಚಿತ್ರಿಸಿ ಅದು ಸಮಕಾಲೀನ ಹೆಣ್ಣಿನ ಸ್ಥಿತಿಯೂ ಹೌದು ಎಂಬುದನ್ನು ನೆನಪಿಸುತ್ತಾರೆ.

ಕಾದಂಬರಿಯ ಆರಂಭದಲ್ಲಿ ಅಹಲ್ಯೆಯ ತಂದೆ ತಾಯಿಗಳಾದ ಮುದ್ಗಲ–ಧೌಮಾ ಅವರ ಪಾತ್ರ ಚಿತ್ರಣ ಮುಖೇನ ಹೆಣ್ಣನ್ನು ಪುರುಷ ಜಗತ್ತು ನಾನಾ ಐಡಿಯಾಲಾಜಿಗಳಲ್ಲಿ ಬಂಧಿಸಲ್ಪಟ್ಟಿರುವ, ಶೋಷಣೆ ಮಾಡುತ್ತಿರುವ, ಅವಳ ಬದುಕನ್ನು ಕಸಿದಿರುವ, ಸೂಕ್ಷ್ಮಾತಿಸೂಕ್ಷ್ಮ ಸಂಗತಿಗಳನ್ನು ಪ್ರಭಾವತಿಯವರು ತಿಳಿಸುವ ಪ್ರಯತ್ನ ಮಾಡಿದ್ದಾರೆ. ಧೌಮಗೆ ಧೌಮ ಎಂದು ಹೆಸರಿಟ್ಟು ಕರೆತಂದು ದಾಂಪತ್ಯ ಜೀವನವನ್ನು ಆರಂಭಿಸಿದವರು ಮುದ್ಗಲ ಋಷಿಗಳು. ಹೆಣ್ಣನ್ನು ಲೈಂಗಿಕ ಸುಖಕ್ಕಾಗಿ ತನಗೆ ಬೇಕಾದಂತೆ ಬದಲಾಯಿಸಿಕೊಳ್ಳುವ ಚಿತ್ರಣ ಇಲ್ಲಿದೆ. ಧೌಮ ಕಾಡುಕನ್ಯೆ. ಇವಳ ಮಗಳೆ ಅಹಲ್ಯೆ. ನೂಲಿನಂತೆ ಸೀರೆ ತಾಯಿಯಂತೆ ಮಗಳು ಎಂಬ ಗಾದೆಯನ್ನು ನೆನಪಿಸುವಂತೆ ಅಹಲ್ಯೆ ತಾಯಿಯನ್ನು ಅನುಸರಿಸುತ್ತಾಳೆ. ಮಗ ದೀವೋದಾಸ ತಂದೆಯಾದ ಮುದ್ಗಲರನ್ನು ಅನುಸರಿಸುತ್ತಾನೆ. ಇಂದಿಗೂ ಆಧುನಿಕ ಸಮಾಜದಲ್ಲಿ ಗಂಡು–ಹೆಣ್ಣು ಸಾಮಾಜೀಕರಣಕ್ಕೆ ಒಳಗಾಗುವಾಗ ಮಗ ತಂದೆಯನ್ನು, ಮಗಳು ತಾಯಿಯನ್ನು ಅನುಸರಿಸಬೇಕು ಎಂಬ ಅಘೋಷಿತ ನಿಯಮಗಳೇ ಇವೆ. ಸಾಮಾಜೀಕರಣದ ನಿರೀಕ್ಷೆಗಳನ್ನು ಪೂರೈಸಲಾಗದ ಗಂಡಿಗೆ ಅವರ ತಂದೆಯನ್ನು, ಮಗಳಿಗೆ ಅವರ ತಾಯಿಯನ್ನು ದೂರುವ ಕ್ರಿಯೆಗಳು ಇವೆ. ಆ ಹಿನ್ನೆಲೆಯಲ್ಲಿ ನೂಲಿನಂತೆ ಸೀರೆ, ತಾಯಿಯಂತೆ ಮಗಳು ಎಂಬ ಗಾದೆಯೂ ಹುಟ್ಟಿಕೊಂಡಿದೆ. ಗಂಡಿಗೆ ಮತ್ತು ಹೆಣ್ಣಿಗೆ

ಬೇರೆಬೇರೆ ಗುಣ, ಸ್ವಭಾವ ಮತ್ತು ಕಾರ್ಯಗಳನ್ನು ಆರೋಪಿಸಿರುವ ಈ ಸಮಾಜ ಗಂಡು ಹೆಣ್ಣು ಇರಬೇಕಾದ ರೀತಿ, ಸಾಧಿಸಬೇಕಾದ ಮಾರ್ಗಗಳನ್ನು ಸೂಚಿಸಲಾಗಿದೆ. ಈ ಕಾದಂಬರಿಯಲ್ಲಿಯೂ ಮುದ್ಗಲ–ಧೌಮಾ ಅವರ ಮಕ್ಕಳಾದ ಅಹಲ್ಯೆ ಮತ್ತು ದೀವೋದಾಸರ ನಡವಳಿಕೆ ಮತ್ತು ಸಾಧಿಸಬೇಕಾದ ಮಾರ್ಗಗಳನ್ನು ಸೂಚಿಸಲಾಗಿದೆ. ಅಹಲ್ಯೆಗೆ ವೇದಪಾಠಗಳನ್ನು ಕಲಿಯಬಾರದು, ಪುರುಷನ ಮುಂದೆ ನಿಂತು ಮಾತನಾಡಬಾರದು, ಪುರುಷನ ಮಾತುಗಳನ್ನು ಕೇಳಿಸಿಕೊಳ್ಳಬಾರದು ಎಂಬಂತಹ ಇತ್ಯಾದಿ ಪ್ರತಿಬಂಧಗಳನ್ನು ಹೇರಲಾಗಿದೆ. ಅವಳ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಸಿದುಕೊಂಡಿರುವ ಬಗೆಗಳನ್ನು ಲೇಖಕಿ ಚಿತ್ರಿಸುವ ಪ್ರಯತ್ನ ಮಾಡುತ್ತಾರೆ. 'ಗಾಯತ್ರೀಂ ಛಂದಸಾಂ ಮಾತಾ' (ಗಾಯತ್ರಿ ಮಾತಿನ ತಾಯಿ) ಎಂದಿದ್ದರೂ ಹೆಣ್ಣಿನ ಮಾತನ್ನೇ ಕಸಿದುಕೊಂಡು ಅವಳನ್ನು ವೇದಗಳ ಕಾಲದಿಂದಲೂ ಮೌನವಾಗಿರಿಸಿ, ಹೆಣ್ಣಿಗೆ ಮೌನವೇ ಭೂಷಣ ಎಂಬ ಮೌಲ್ಯವನ್ನು ವೈಭವೀಕರಿಸಲಾಗಿದೆ ಎಂಬುದನ್ನು ಕಾದಂಬರಿಯಲ್ಲಿ ಚರ್ಚೆಗೆ ತಂದಿದ್ದಾರೆ.

ಪ್ರಭಾವತಿಯವರ ಅಹಲ್ಯೆ ಬಾಲ್ಯದಿಂದಲೇ ಪುರುಷ ಜಗತ್ತಿನ ಕಟ್ಟುನಿಟ್ಟುಗಳನ್ನು, ಪ್ರತಿಬಂಧಕಗಳನ್ನು ಮೀರುತ್ತಾ ಬಂದವಳು. ಋಷಿಗಳ ಮಾತುಗಳನ್ನು ಗಮನವಿಟ್ಟು ಕೇಳಿಸಿಕೊಳ್ಳುವುದು, ಕುತೂಹಲದ ಮನಸ್ಥಿತಿಯನ್ನು ಹೊಂದಿರುವುದು, ಪುರುಷರ ಮುಂದೆ ನಿಲ್ಲುವುದು, ಗಾಯತ್ರಿ ಮಂತ್ರ ಉಚ್ಚಾರಣೆ ಮಾಡುವುದು ಹೀಗೆ ಹೆಣ್ಣಿಗೆ ನಿರ್ಬಂಧಿಸಲ್ಪಟ್ಟಿದನ್ನು ಮೀರುವ ಪ್ರಯತ್ನದ ಅಹಲ್ಯೆಇಲ್ಲಿ ಕಂಡುಬಂದರೂ ಅವಳ ಮೀರುವಿಕೆಯನ್ನು ತಡೆಯುವ ತಂದೆ ಮುದ್ಗಲರ ಚಿತ್ರಣವೂ ಇದೆ. ಅತಿಥಿಗಳಾಗಿ ಬಂದ ಋಷಿಗಳು ಮುದ್ಗಲರೊಂದಿಗೆ ವೇದಮಂತ್ರಗಳ ಕುರಿತು ಚರ್ಚೆ ಮಾಡುತ್ತಿರುವಾಗ ಅದನ್ನು ಆಸಕ್ತಿಯಿಂದ ಕೇಳಿಸಿಕೊಂಡು ಪ್ರತಿಕ್ರಿಯಿಸುವ ಅಹಲ್ಯೆಗೆ ತಂದೆ ಮುದ್ಗಲರು "ಅಹಲ್ಯಾ ಒಳಗೆ ಹೋಗಿ ತಾಯಿಗೆ ಅಡಿಗೆ ಸಿದ್ದತೆಯಲ್ಲಿ ಸಹಾಯ ಮಾಡು"[10] ಎಂದು ಅಪ್ಪಣೆ ಮಾಡುತ್ತಾನೆ. ಪುರುಷನ ಕಣ್ಣಿನಲ್ಲಿರುವ ಹೆಣ್ಣಿನ ಸಾಧನೆಯ ಕ್ಷೇತ್ರವನ್ನು ಇದು ಸೂಚಿಸುವಂತೆ ಇದೆ.

ಅಹಲ್ಯೆಯ ಬಾಲ್ಯ–ಯೌವನಾವಸ್ಥೆ–ಅವಳ ಮುಗ್ಧತೆ ಮತ್ತು ಕನಸುಗಳು, ಗೌತಮನ ಮೊದಲ ಭೇಟಿ ಇವುಗಳನ್ನು ಚಿತ್ರಿಸುತ್ತಾ ಸಹಜ ಹೆಣ್ಣಿನ ಸ್ವಭಾವ ಸ್ಥಿತಿಗಳನ್ನು ಲೇಖಕಿ ಚಿತ್ರಿಸುತ್ತಾರೆ. ಮದುವೆಯ ವಿಷಯದಲ್ಲಿ ಸಂಗಾತಿ ಸಂಗಾತನನ್ನು ಆಯ್ಕೆ ಮಾಡುವುದರಲ್ಲಿ ಗಂಡಿಗೊಂದು ನಿಯಮ ಹೆಣ್ಣಿಗೊಂದು ನಿಯಮವಿದೆ.ಇದನ್ನು ಅಹಲ್ಯೆ ಮತ್ತು ಗೌತಮರ ಮದುವೆಯ ಸಂದರ್ಭದಲ್ಲಿ ಚಿತ್ರಿಸುವ ಪ್ರಯತ್ನ ಲೇಖಕಿಯದು. ಮುದ್ಗಲರಿಗೆ ಅಹಲ್ಯೆಯನ್ನು ಒಬ್ಬ ಋಷಿಯೊಂದಿಗೆ ವಿವಾಹ ಪೂರೈಸಿಕೊಟ್ಟರೆ ಸಾಕು ನನ್ನ ಜವಾಬ್ದಾರಿ ಮುಗಿಯಿತು ಎಂಬ ಒತ್ತಡದ ಮನೋಭಾವವನ್ನು ಪ್ರಧಾನವಾಗಿ ತರುತ್ತಾ, ಈ ವಿವಾಹದಲ್ಲಿ ಅಹಲ್ಯೆಯ ಅಭಿಪ್ರಾಯ ಕೇಳುವುದು, ಅವಳ ಒಪ್ಪಿಗೆಯನ್ನು ಪಡೆಯುವುದು ಇವು ಯಾವುವೂ ಬೇಡವಾದ ಮತ್ತು ನಿಷಿದ್ಧವಾದ ವಿಷಯಗಳಾಗಿವೆ. ಮತ್ತೊಮ್ಮೆ ಹೆಣ್ಣಿಗೆ ತನ್ನದೆ ಆದ ಆಯ್ಕೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಇಲ್ಲದೆ ಇರುವುದನ್ನು ಇಲ್ಲಿ ನೆನಪಿಸುವ ಪ್ರಯತ್ನ ಮಾಡುತ್ತಾರೆ.

ಗೌತಮನೊಂದಿಗೆ ಅಹಲ್ಯೆಯ ವಿವಾಹವಾದ ನಂತರ ಕಾದಂಬರಿಯ ಮುಂದಿನ ಭಾಗದಲ್ಲಿ ಅವರ ಆದರ್ಶ ದಾಂಪತ್ಯದ ಚಿತ್ರಣವನ್ನು ಕೊಡುತ್ತಾರೆ. ಗೌತಮ ಮತ್ತು ಅಹಲ್ಯೆ ಪಾತ್ರಗಳನ್ನು ಈ ಸಂದರ್ಭದಲ್ಲಿ ಮನೋವೈಜ್ಞಾನಿಕವಾಗಿ ವಿವರಿಸಿಕೊಳ್ಳುವ ಪ್ರಯತ್ನವನ್ನು ಲೇಖಕಿ ಪ್ರಭಾವತಿಯವರು ಮಾಡಿದ್ದಾರೆ. ವಿವಾಹ

ಪೂರ್ವ ಮತ್ತು ವಿವಾಹೋತ್ತರ ಬದುಕಿನಲ್ಲಿ ಗಂಡು ಮತ್ತು ಹೆಣ್ಣಿನ ಆಸೆ ಆಕಾಂಕ್ಷೆ, ಮನೋಭಾವಗಳು ಮತ್ತು ಧೋರಣೆಗಳನ್ನು ಚಿತ್ರಿಸುತ್ತಾ ಇವುಗಳಲ್ಲಿರುವ ಭಿನ್ನತೆಗಳನ್ನು ಅವರ ದಾಂಪತ್ಯದ ಬದುಕಿನ ಚಿತ್ರಣದೊಂದಿಗೆ ಓದುಗರ ಗಮನಕ್ಕೆ ತಂದುಕೊಡುತ್ತಾರೆ. ಗೌತಮನಿಗೆ ಸಾಧನೆ ಮಾಡುವ, ತಾನು ಅಯೋಧ್ಯೆ ವ್ಯಾಪ್ತಿಯ ಗುರುಕುಲಕ್ಕೆಲ್ಲಾ ತಾನೇ ಕುಲಪತಿಯಾಗುವ, ಬ್ರಾಹ್ಮಣತ್ವದ ಬಗ್ಗೆ, ವರ್ಣಸಂಕರ ಬಗ್ಗೆ ಸಂಶೋಧನೆ ಮಾಡುವ, ಹೆಚ್ಚು ಹೆಚ್ಚು ಅಧ್ಯಯನ ಮಾಡುವ ಹಂಬಲವುಳ್ಳ ಗೌತಮನ ಚಿತ್ರಣ – ಪುರುಷ ಸದಾ ಸಾಧನೆಯ ಚಪಲವನ್ನು ಅಥವಾ ಆ ಮನೋಭಾವದವನಾಗಿರುತ್ತಾನೆ ಎಂಬುದನ್ನು ನೆನಪಿಸುತ್ತದೆ.

ಪುರುಷ ಸದಾ ಸಾಧನೆಯ ಕಡೆ ಅಷ್ಟೇ ಮನಸ್ಸು ಮಾಡುತ್ತಿರುತ್ತಾನೆ, ಆಸಕ್ತನಾಗಿರುತ್ತಾನೆ, ತನ್ನ ಇಚ್ಛೆಯ ಕ್ಷೇತ್ರದಲ್ಲಿ ಸಾಧನೆ ಮಾಡುವುದರಲ್ಲಿ ಅವನ ಪ್ರಧಾನ ಜವಾಬ್ದಾರಿ ಇದೆ, ತಪಸ್ಸು, ಜ್ಞಾನದ ಕ್ಷೇತ್ರವೇ ನನ್ನದು ನನ್ನಿಂದ ಎಂಬ ಅಹಂ – ಈ ರೀತಿಯ ಪಿತೃ ಪ್ರಧಾನ ಸಮಾಜ ನಿರ್ಮಿತ ಐಡಿಯಾಲಜಿಗಳನ್ನು ಲೇಖಕಿ ಚಿತ್ರಿಸಿ ಇಲ್ಲಿ ಹೆಣ್ಣಿನ ಅಸ್ತಿತ್ವ ಏನಾಯಿತು? ಎಂಬುದರ ಪ್ರಶ್ನೆಯನ್ನು ಅಹಲ್ಯೆಯ ಪಾತ್ರ ಮುಖೇನ ಚಿತ್ರಿಸಿ ತೋರಿಸಿದ್ದಾರೆ. ಅಹಲ್ಯೆಯು ಗರ್ಭಿಣಿಯಾದಾಗ ಅವಳ ಬಸುರಿನ ಬಯಕೆಗಳನ್ನು ಲೆಕ್ಕಿಸದೆ ತಪಸ್ಸಿನ ಕಡೆ ಮನಸ್ಸು ಮಾಡುತ್ತಾನೆ ಗೌತಮ.

ಲೇಖಕಿ ಪ್ರಭಾವತಿಯವರು ಚಿತ್ರಿಸುವ ಗೌತಮ ಹೃದಯ ಹೀನನಲ್ಲ. ಹೆಂಡತಿಯ ನೋವುಗಳಿಗೆ ಸ್ಪಂದಿಸುವವನು, ಹೆಂಡತಿಯ ಮನಸ್ಸು, ಅವಳ ಆಸೆ ಆಕಾಂಕ್ಷೆಗಳನ್ನು ಅರಿಯಬಲ್ಲವನು. ಆದರೆ ತನ್ನದೇ ಆದ ಬದುಕಿನ ಕಟ್ಟುಪಾಡುಗಳು, ಸಮಾಜದ ರೀತಿನೀತಿಗಳು ಮತ್ತು ಪರಂಪರೆಯಿಂದ ಬಂದ ಆದರ್ಶಗಳ ಆರಾಧಕ. ತನ್ನ ಹೆಂಡತಿ ಅಹಲ್ಯೆ ಬಿಸಿಲಿನಲ್ಲಿ ನೀರುತರುವ ಕಷ್ಟವನ್ನು ನೋಡಿ ಮರುಗಿ ಅದಕ್ಕೆ ಒಂದು ಪರಿಹಾರವನ್ನು ತೋರಲು ಚಿಂತಿಸುವವನು. ಪಾದುಕೆಗಳನ್ನು ಮತ್ತು ಛತ್ರಿಯನ್ನು ಸಂಶೋಧಿಸಿದವನು. ಆದರೆ ಹೆಣ್ಣಿನ ಬಗ್ಗೆ ಕೆಲವು ಪೂರ್ವಗ್ರಹಗಳನ್ನು ಹೊಂದಿದವನು. ತನ್ನ ಸಾಧನೆಗೆ ಇವಳು ಅಡ್ಡಿಯಾಗಬಹುದು ಎಂಬ ಭಯವನ್ನು ತನ್ನ ಮನಸ್ಸಿನ ಆಳದಲ್ಲಿ ಇರಿಸಿಕೊಂಡವನು. ಈ ಭಯದ ಪರಿಣಾಮವೇನೋ ಎಂಬಂತೆ ಅವನು ನೀಡುವ ಕಾಮದ ಬಗೆಗಿನ ವಿವರಣೆಯನ್ನು ನೋಡಬೇಕು.

**“**ಅಹಲ್ಯಾ, ಕಾಮವು ಮನುಷ್ಯನ ಬದುಕಿನಲ್ಲಿ ಪೂರಕವಾದ ಅಂಗವಾಗಬೇಕೇ ಹೊರತು ಪ್ರಧಾನ ಅಂಗವಾಗಬಾರದು. ಪುರುಷಾರ್ಥಗಳಲ್ಲಿ ಕಾಮಕ್ಕೆ ಮೊದಲ ಸ್ಥಾನವನ್ನು ಕೊಡುವ ಮೂಲಕ ಸ್ಮೃತಿ ಗ್ರಂಥಗಳು ಬದುಕಿನಲ್ಲಿ ಅದಕ್ಕಿರುವ ಮಹತ್ವವನ್ನು ಗುರುತಿಸಿದ್ದರೂ ಕೊನೆಯಲ್ಲಿ ಧರ್ಮವನ್ನೇ ಅಂದರೆ ಮೋಕ್ಷವನ್ನೇ ಎತ್ತಿ ಹಿಡಿದಿವೆ. ಅಂದರೆ ಕಾಮವು ಧರ್ಮಕ್ಕೆ ಅಡ್ಡಿಯಾಗಬಾರದು. ಧರ್ಮಕ್ಕೆ ಪೂರಕವಾಗಬೇಕು**”**[11] ಎಂದು ಹೇಳುತ್ತಾ ಅಹಲ್ಯೆಯು ತನ್ನ ಮೇಲೆ ತೋರುತ್ತಿರುವ ಪ್ರೀತಿ ಪ್ರೇಮದ ಮತ್ತು ಪ್ರಣಯದ ಭಾವಗಳೆಲ್ಲವು ಕಾಮುಕತನದ್ದು ಎಂದು ಪರೋಕ್ಷವಾಗಿ ಬಿಂಬಿಸುತ್ತಾನೆ.

ಭಾರತೀಯ ಮತ್ತು ಪಾಶ್ಚಾತ್ಯ ಪುರಾಣಗಳಲ್ಲಿಯೂ ಹೆಣ್ಣನ್ನು ಇದೇ ನೆಲೆಯಲ್ಲಿ ನೋಡಲಾಗಿದೆ.ಹೆಣ್ಣು ತ್ಯಾಗಮಯಿಯಾಗಿ ಪುರುಷನ ಸಾಧನೆಯ ಹಿಂದೆ ಇರುವವಳು ಎಂಬ ಒಂದು ಮಿಥ್ಯೆ ಕಲ್ಪನೆಯಂತೆ ಪುರುಷನ ಸಾಧನೆಗೆ ತನ್ನ ಕಾಮುಕತನದಿಂದ ಅಡ್ಡಿಪಡಿಸುವವಳು ಎಂಬ ಮತ್ತೊಂದು ಮಿಥ್ಯೆಕಲ್ಪನೆ ಇದೆ. ಅಹಲ್ಯೆಯ ಪಾತ್ರದ ಚಿತ್ರಣದಲ್ಲಿಯೂ ಇದೇ ಅಂಶ ಬಿಂಬಿತವಾಗುತ್ತಿದೆ.

ಕಾದಂಬರಿಯಲ್ಲಿ ಇಂದ್ರನ ಪಾತ್ರ ಪ್ರವೇಶ ಮತ್ತು ಕಲ್ಪನೆ ವಿಶೇಷವಾಗಿದೆ. ಗೌತಮ ಮತ್ತು ಇಂದ್ರನ ವ್ಯಕ್ತಿತ್ವಗಳ ಮಧ್ಯೆ ಕಳೆದುಹೋಗುವ ಅಹಲ್ಯಾ ತನ್ನ ಅಸ್ತಿತ್ವವೇ ಇಲ್ಲದ ಕೇವಲ ಪುರುಷ ಅಧೀನಳಾಗಿ, ನಿಸ್ಸಹಾಯಕಳಾಗಿ ಇರುವ ವಸ್ತುವಾಗಿದ್ದಾಳೆ. ಗೌತಮ ತಪಸ್ಸಿನ ಉದ್ದೇಶವನ್ನು ಅರಿಯಲು ಬರುವ ಇಂದ್ರನಲ್ಲಿ ಅಹಲ್ಯಾ ಆಸಕ್ತಳಾಗುತ್ತಾಳೆ. ಹಾಗೆ ನೋಡಿದರೆ ಬಾಲ್ಯದಿಂದಲೂ ಇಂದ್ರನ ಹೆಸರನ್ನು ಮತ್ತು ಅವನೇ ತನ್ನ ಗಂಡನಾಗುತ್ತಾನೆ ಎಂಬ ಮಾತುಗಳನ್ನು ಕೇಳಿ ಅವನ ಇರುವಿಕೆಯ ರೀತಿಯನ್ನು ಕಲ್ಪಿಸಿಕೊಂಡವಳು ಅಹಲ್ಯಾ. ಈಗ ಅಹಲ್ಯಾ ಮುಂದೆ ಇಂದ್ರ ಬಂದಿದ್ದಾನೆ. ಅಹಲ್ಯಾಳ ಮನಸ್ಸನ್ನು ಆವರಿಸಿಕೊಳ್ಳುತ್ತಿದ್ದಾನೆ. ಮಗುವಿನ ನಾಮಕರಣಕ್ಕೆ ಬಂದಾಗಲೂ ಅಹಲ್ಯಾಳ ಮನಸ್ಸನ್ನು ಮತ್ತಷ್ಟು ಆವರಿಸಿಕೊಳ್ಳುತ್ತಾನೆ. ಆ ಸಂದರ್ಭದಲ್ಲಿಯೇ ಅಹಲ್ಯಾಳ ಕಣ್ಣಿಗೆ ಇಂದ್ರನ ಮುಖ ಗೌತಮನ ಮುಖದಂತೆ ಕಾಣುತ್ತದೆ. ಅವಳಿಗೆ ಅರಿವಿಲ್ಲದಂತೆ ಇಂದ್ರನನ್ನು ಬಯಸುತ್ತಾಳೆ. ಗೌತಮನ ವೇಷದಲ್ಲಿ ಬರುವ ಇಂದ್ರನಿಗೆ "ನೀನು ಹೀಗೆ ನನ್ನ ಗಂಡನ ವೇಷದಲ್ಲಿ ಬರುವುದೇಕೆ, ದೇವರಾಜನ ವೇಷವೇ ನನಗೆ ಪ್ರಿಯ..." ಎಂದು ಮೊದಲ ಬಾರಿಗೆ ಸಲಿಗೆಯಿಂದ ಏಕವಚನದಲ್ಲಿ ಸಂಭಾಷಿಸುತ್ತಾಳೆ. ಇದೇ ಸಂದರ್ಭದಲ್ಲಿ ಗೌತಮ ಅಹಲ್ಯಾಳ ಮಾತುಗಳಾವುದಕ್ಕೂ ಸ್ಪಂದಿಸದೆ ತಪಸ್ಸಿನ ಕಡೆ ಮನಸ್ಸು ಮಾಡಿರುತ್ತಾನೆ. ಇಂದ್ರ ಬೆಕ್ಕಿನ ವೇಷದಲ್ಲಿ ಗೌತಮನ ಆಶ್ರಮವನ್ನು ಪ್ರವೇಶಿಸಿ ಅಹಲ್ಯಾಳೊಂದಿಗೆ ಸೇರುತ್ತಾನೆ.

"ಅಪ್ಪಾ, ತಪಸ್ಸೆಂದರೇನು? ಎಷ್ಟು ವರ್ಷವೋ? ಎಂದು ತುಂಬಾ ಹೆದರಿದ್ದಿರಲ್ಲವೇ? ನಾನು ಹೇಳಲಿಲ್ಲವೆ. ಸಾಂಸಾರಿಕ ಜಂಜಡದಿಂದ ಕಲುಷಿತವಾಗಿರುವ ಮನಸ್ಸನ್ನು ಕೊಂಚ ಮಟ್ಟಿಗೆ ಪರಿಶುದ್ಧ ಮಾಡಿಕೊಳ್ಳುವೆ ಅಷ್ಟೇ ಎಂದು.ಇನ್ನು ಮುಂದೆ ಅಹಲ್ಯಳೊಂದಿಗೇ ನನ್ನ ತಪಸ್ಸು ಅವಿರತವಾಗಿ ಸಾಗುತ್ತದೆ"[12]– ಎಂದು ಗೌತಮ ತಂದೆಯೊಂದಿಗೆ ಹೇಳುತ್ತಾ ತಪಸ್ಸನ್ನು ನಿಲ್ಲಿಸಿ ಅಹಲ್ಯಾ ಕೋಣೆಯನ್ನು ಪ್ರವೇಶಿಸಿದಾಗ ಅಲ್ಲಿ ಮಜ್ಜರಾದ ರೂಪದಲ್ಲಿ ಇದ್ದ ದೇವೇಂದ್ರ ಪ್ರಕಟಗೊಳ್ಳುತ್ತಾನೆ. ಸಂದರ್ಭದ ಪೂರ್ಣತೆಯನ್ನು ಅರಿತ ಗೌತಮ ಕೋಪದಲ್ಲಿ ಇಂದ್ರನಿಗೆ ನಿನ್ನ ಪುರುಷತ್ವವೇ ನಾಶವಾಗಲಿ ಎಂದು ಶಾಪನೀಡುತ್ತಾನೆ. ಇಂದ್ರನೂ ನನಗೆ ಇದೇ ಬೇಕಾಗಿದ್ದು. ಇಷ್ಟು ಕಾಲ ಕಷ್ಟದಿಂದ ಪಡೆದ ತಪಸ್ಸಿನ ಫಲ ಈ ಶಾಪಕ್ಕೆ ನಷ್ಟವಾಗಬೇಕಿತ್ತು. ಪೌರುಷವನ್ನು ನಮ್ಮ ದೇವಲೋಕದವರಿಗೆ ಮತ್ತೆ ಹೇಗೆ ಪಡೆಯುವುದು ಗೊತ್ತಿದೆ ಎಂದು ಹೇಳಿ ಅದೃಶ್ಯನಾಗುತ್ತಾನೆ.

ನಂತರದಲ್ಲಿ ಮತ್ತೆ ಗೌತಮ ತಪಸ್ಸಿಗೆ ಕೂರುತ್ತಾನೆ. ಅಹಲ್ಯೆ ಕಡೆ ಕಣ್ಣೆತ್ತಿಯೂ ನೋಡದೆ ಐದು ವರ್ಷಗಳವರೆಗೆ ಇದ್ದು ಬಿಡುತ್ತಾನೆ. ಅಹಲ್ಯೆ ಕೂಡ ಗಂಡ ಕ್ಷಮಿಸಬಾರದಂತಹ ತಪ್ಪನ್ನು ನಾನು ಮಾಡಿರುವೆನೆ? ಎಂಬ ಭಾವನೆಯೇ ಕ್ರಮೇಣ ರೂಪಾಂತರಗೊಂಡು 'ಮಾಡಿರುವೆ' ಎಂಬ ಅಪರಾಧೀ ಭಾವ ಮಾರ್ಪಟ್ಟು ಅಹಲ್ಯಾ ಐದು ವರ್ಷಗಳಲ್ಲಿ ಸವೆದು ಹೋಗಿರುತ್ತಾಳೆ.

ಕಾದಂಬರಿಯ ಮುಂದಿನ ಭಾಗದಲ್ಲಿ ಗೌತಮನ ಆಶ್ರಮಕ್ಕೆ ರಾಮ ಲಕ್ಷ್ಮಣರನ್ನು ವಿಶ್ವಾಮಿತ್ರರು ಕರೆದುಕೊಂಡು ಬಂದಿದ್ದಾರೆ. ತಾಟಕಿ ಸಂಹಾರ ಮತ್ತು ಅಹಲ್ಯೆಯನ್ನು ರಾಮನಿಂದ ಉದ್ಧರಿಸುವ ಉದ್ದೇಶ ಅವರದು. ಈ ಪುಣ್ಯ ಕಾರ್ಯದಿಂದ ತಾನು ಈ ಹಿಂದೆ ಮಾಡಿದ ಹೆಣ್ಣಿನ ವಿಷಯದಲ್ಲಿನ ಪಾಪವನ್ನು ಕಳೆದುಕೊಳ್ಳುವ ಇಂಗಿತ ವಿಶ್ವಾಮಿತ್ರರದು.

ಗೌತಮರ ಆಶ್ರಮದಲ್ಲಿರುವ ರಾಮ, ಗೌತಮ ಮತ್ತು ಅಹಲ್ಯೆ ಪರಸ್ಪರ ಮನಸ್ಸುಗಳನ್ನು ಕಲ್ಲು ಮಾಡಿಕೊಂಡು ದೂರವಾಗಿರುವವರನ್ನು ಮೃದುಗೊಳಿಸಿ ಒಂದುಮಾಡುವ ಗುರಿಯನ್ನು ಹೊಂದಿದ್ದಾನೆ. ಅಹಲ್ಯೆಯನ್ನು ತಾಯಿಯ ಭಾವದಲ್ಲಿ ಕಂಡು ಅವಳ ಪಾದಗಳಿಗೆ ನಮಸ್ಕರಿಸಿದ್ದಾನೆ. ಈ ದಂಪತಿಗಳ ಮನಸ್ಸುಗಳನ್ನು ಮೃದುಗೊಳಿಸಲು ಒಂದು ಉಪಾಯವನ್ನು ಮಾಡುತ್ತಾರೆ. ಕಾದಂಬರಿಯಲ್ಲಿನ ಈ ತಂತ್ರಗಾರಿಕೆ ಅರ್ಥಪೂರ್ಣವಾಗಿದೆ. ರಾಮ ಪಾತ್ರದ ಮುಖೇನ ನಮ್ಮ ಸಾಮಾಜಿಕ ಬದುಕಿನ ರೀತಿನೀತಿಗಳನ್ನು ಕಟ್ಟಿಕೊಡುತ್ತಾ ಸಮಾಜದಲ್ಲಿ ಹೆಣ್ಣಿಗೊಂದು ನೀತಿ ಗಂಡಿಗೊಂದು ನೀತಿಯೇ? ಎಂಬುದನ್ನು ಗೌತಮನೊಂದಿಗೆ ಚರ್ಚೆಗೆ ತೆಗೆದುಕೊಳ್ಳುತ್ತಾನೆ. "ಗೌತಮರೇ ಸ್ವಲ್ಪ ಕಣ್ಣು ತೆರೆದು ನೋಡಿ. ನಿಮ್ಮ ಸುತ್ತಮುತ್ತಲ ಕ್ಷತ್ರಿಯರು ಅನೇಕ ಪತ್ನಿಯರನ್ನು ಹೊಂದಿದ್ದಾರೆ. 'ರಾಜನೋ ಬಹುವಲ್ಲಭಾ' ಎಂಬ ಸೂತ್ರವನ್ನು ತಮ್ಮ ಅನುಕೂಲಕ್ಕಾಗಿಯೇ ಮಾಡಿಕೊಂಡು ಹಲವು ಹೆಂಡಿರನ್ನು ಕಟ್ಟಿಕೊಂಡು ಸುಖಿಸುತ್ತಿದ್ದಾರೆ. ಒಬ್ಬ ಗಂಡಸು ಯಾವುದೇ ಕಾರಣದಿಂದ ಹೀಗೆ ಒಬ್ಬಳಿಗಿಂತ ಹೆಚ್ಚು ಜನ ಸ್ತ್ರೀಯರಲ್ಲಿ ರಮಿಸಬಲ್ಲನಾದರೆ, ಒಬ್ಬ ಹೆಂಗಸು ಒಬ್ಬ ಗಂಡನಲ್ಲಿ ಯಾವುದೇ ಕಾರಣದಿಂದ ತೃಪ್ತಿ ಕಾಣದೆ ಇನ್ನೊಂದು ಗಂಡನ್ನು ಬಯಸುವುದರಲ್ಲಿ ತಪ್ಪೇನಿದೆ? ಹೆಣ್ಣಿಗೊಂದು ನೀತಿ ಗಂಡಿಗೊಂದು ನೀತಿಯೇ?"[14] ರಾಮನ ಈ ಮಾತುಗಳಿಂದ ಚರ್ಚೆ ಆರಂಭಗೊಂಡು ಅಹಲ್ಯೆಯ ತಪ್ಪಿನಲ್ಲಿ ಗೌತಮನ ಪಾತ್ರವೂ ಇದೆ ಎಂಬುದನ್ನು ಗೌತಮನಿಗೆ ರಾಮ ಮನವರಿಕೆ ಮಾಡಿಕೊಡುತ್ತಾನೆ ಹಾಗೂ ಲಿಂಗಸಮಾನತೆಯ ಪಾಠ, ಪುರುಷನ ಸ್ತ್ರೀ ವಿರೋಧಿ ಮನೋಭಾವಗಳು, ಹೆಣ್ಣಿನ ಬಗೆಗಿನ ಪೂರ್ವಗ್ರಹ ಮನಸ್ಥಿತಿಗಳ ಕುರಿತು ಚರ್ಚೆಗೊಂಡು ಹೆಣ್ಣಿನ ಅಸ್ತಿತ್ವವನ್ನು ಅರ್ಥಮಾಡಿಸುವ ಪ್ರಯತ್ನವನ್ನು ರಾಮ ಮಾಡುತ್ತಾನೆ. "ನಿಸರ್ಗ ಹೇಳುವ ನಿಯಮವೇ ಬೇರೆ, ಹೆಣ್ಣಿಗಾಗಲೀ ಗಂಡಿಗಾಗಲೀ ಶಾಸ್ತ್ರಗಳು ಧರ್ಮಗಳು ಹೇಳುವ ನಿಯಮವೇ ಬೇರೆ, ಅದು ಗಂಡಿಗೊಂದು ರೀತಿ, ಹೆಣ್ಣಿಗೊಂದು ರೀತಿ. ಈ ಶಾಸ್ತ್ರದ ಹಿನ್ನೆಲೆಯನ್ನು ಬಿಟ್ಟು ನೀವು ಗಂಡಸರು ಯೋಚಿಸಲಾರಿರಿ. ಆದ್ದರಿಂದ ನಿಮ್ಮ ದೃಷ್ಟಿ ಯಾವಾಗಲೂ ಪೂರ್ವಾಗ್ರಹಪೀಡಿತ..."[13] ಈ ಮಾತುಗಳ ಮೂಲಕ ಅಹಲ್ಯೆ ತಪ್ಪಿಗೆ ಸಂದರ್ಭ ಮತ್ತು ಕಾರಣಗಳನ್ನು ಅರ್ಥೈಸುತ್ತಾನೆ ರಾಮ.

ರಾಮನ ದೀರ್ಘ ಹಿತೋಪದೇಶದಿಂದ ಗೌತಮನ ಮನಸ್ಸು ಕರಗುತ್ತದೆ.ಗೌತಮನಿಗೆ ತನ್ನ ತಪ್ಪಿನ ಅರಿವಾಗುತ್ತದೆ."... ನಾನು ನಿನ್ನನ್ನು ತಪಸ್ಸಿಗೆ ತೊಡಗಿಸದೇ ನನ್ನೊಬ್ಬನ ಆತ್ಮೋದ್ಧಾರಕ್ಕೆ ಪ್ರಯತ್ನ ಪಟ್ಟಿದ್ದೇ ನನ್ನ ತಪ್ಪಾಯಿತು.ಮತ್ತೆ ಆ ತಪ್ಪನ್ನು ಮಾಡಲಾರೆ..."[15]ಎಂದು ಹೇಳಿ ಅಹಲ್ಯೆಯನ್ನು ತನ್ನ ಸರಿಸಮಾನವಾಗಿ ಕುಳ್ಳಿರಿಸಿ ತಪಸ್ಸು ಮಾಡಿಸುತ್ತಾನೆ.

ಸಣ್ಣಪುಟ್ಟ ಕಥಾ ವಿವರಗಳೊಂದಿಗೆ ಕಾದಂಬರಿ ಮುಂದೆ ಬೆಳೆದರೂ, ಲೇಖಕಿಯ ಆಶಯ ಸ್ಪಷ್ಟವಾಗಿ ಇಲ್ಲಿಗೆ ಗೋಚರಿಸುತ್ತದೆ. ಹೆಣ್ಣಿಗೆ ಈ ಪುರುಷ ಪ್ರಧಾನ ಸಮಾಜ ಹೇರಿರುವ ನಿರ್ಬಂಧಗಳೆಲ್ಲವೂ ಎಷ್ಟೆಲ್ಲಾ ಅನಾಹುತಗಳನ್ನು ಉಂಟುಮಾಡುತ್ತಿವೆ, ಪುರುಷ ಮತ್ತು ಹೆಣ್ಣಿನ ಬದುಕಿನ ಗುರಿಗಳು ಬೇರೆ ಬೇರೆ ಹೇಗೆ? ಈ ತಾರತಮ್ಯದ ನೆಲೆಗಳು ಏಕೆ? ಎಂಬಂತಹ ಹಲವು ಪ್ರಶ್ನೆಗಳನ್ನು ಕಾದಂಬರಿ ಕೇಳುತ್ತದೆ. ಹೆಣ್ಣಿಗೆ ಅವಳ ಅಸ್ತಿತ್ವ ಮತ್ತು ಸ್ವಾತಂತ್ರ್ಯವನ್ನೇ ಕಸಿದುಕೊಂಡ ಪರಿಣಾಮ ಹೆಣ್ಣಿನ ಸ್ಥಿತಿ ಏನಾಯಿತು ಎಂಬುದನ್ನು ಅಹಲ್ಯೆ ಪಾತ್ರದ ಮೂಲಕ ಕಾಣುವ ಪ್ರಯತ್ನ ಲೇಖಕಿಯರದು. ಶಿಕ್ಷಣ ಮತ್ತು ಅಭಿವ್ಯಕ್ತಿಯ ಸ್ವಾತಂತ್ರ್ಯವನ್ನು ಕಸಿದುಕೊಂಡ ಪುರುಷ ಸಮಾಜದ ಸ್ವಾರ್ಥದ ನಿಲುವುಗಳನ್ನು ಮನವರಿಕೆ ಮಾಡಿಸುತ್ತಾರೆ. ವೇದಗಳನ್ನು

ಕಲಿಯುವ, ಯಾಗಗಳಲ್ಲಿ ಭಾಗವಹಿಸುವ, ತಪಸ್ಸು ಮಾಡುವ ಅರ್ಹತೆ, ಸ್ಥಾನಮಾನಗಳು ಹೆಣ್ಣಿಗೆ ಇದ್ದರೂ ಅದನ್ನು ನಿಷೇಧಿಸಿ, ತನ್ನ ಆತ್ಮೋದ್ಧಾರಕ್ಕೆ ಮಾತ್ರ ಚಿಂತಿಸುವ ಪುರುಷ ಜಗತ್ತನ್ನು ಇಲ್ಲಿ ಅನಾವರಣ ಮಾಡಿಸುತ್ತಾರೆ. ಕಾದಂಬರಿಯ ಕೊನೆಯಲ್ಲಿ ಹೆಣ್ಣಿನ ಆತ್ಮೋದ್ಧಾರಕ್ಕೆ ಅವಳಿಗೂ ಸಮಾನ ಶಿಕ್ಷಣ ಅವಶ್ಯಕವಾಗಿದೆ ಎಂಬ ತಮ್ಮ ನಿಲುವನ್ನು ಲೇಖಕಿ ಪ್ರಭಾವತಿ ಅವರು ಈ ಕಾದಂಬರಿಯಲ್ಲಿ ಸಾಧಿಸಿದ್ದಾರೆ. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಸಿದುಕೊಂಡ ಪರಿಣಾಮಗಳನ್ನು, ಪಾವಿತ್ರ್ಯದ ಹುಚ್ಚು ಕಲ್ಪನೆಗಳನ್ನು ಅರ್ಥೈಸಿದ್ದಾರೆ. ಎಸ್.ವಿ.ಪ್ರಭಾವತಿ ಅವರ 'ಅಹಲ್ಯೆ' ಗೌತಮ ಮತ್ತು ಇಂದ್ರರಂತ ಪುರುಷರಿಂದ ತನ್ನ ವ್ಯಕ್ತಿತ್ವ ಮತ್ತು ಅಸ್ತಿತ್ವವನ್ನು ಕಳೆದುಕೊಂಡವಳು. ಪುರುಷ ಜಗತ್ತಿನ ನಿರ್ಬಂಧಗಳನ್ನು ಮೀರಿ ಪತಿ ಗೌತಮನೊಂದಿಗೆ ಸಮಾನವಾಗಿ ಅನ್ಯೂನತೆಯಿಂದ ಆತ್ಮೋದ್ಧಾರದಲ್ಲಿ ನಿಂತವಳು.

ಹೆಚ್.ಜಿ. ರಾಧಾದೇವಿಯವರು ತಮ್ಮ 'ಅಹಲ್ಯೆ' ಕಾದಂಬರಿಯನ್ನು ಪೌರಾಣಿಕ ಕಾದಂಬರಿಯೆಂದು ಗುರುತಿಸಿಕೊಳ್ಳದೆ ಐತಿಹಾಸಿಕ ಕಾದಂಬರಿಯೆಂದು ಗುರುತಿಸಿಕೊಂಡಿದ್ದಾರೆ. ಆದರೆ ಕಾದಂಬರಿಯ ವಸ್ತು ಮತ್ತು ಪಾತ್ರ ಪುರಾಣದ್ದೇ ಆಗಿದೆ. ರಾಧಾದೇವಿಯವರ ಅಹಲ್ಯೆ ಪತಿಪರಾಯಣೆ, ಪತಿಯ ಇಚ್ಛೆಯನ್ನು ಅರಿತು ನಡೆಯುವವಳು, ಪತಿಯ ಹಿತವನ್ನೇ ಸದಾ ಬಯಸುವವಳು. ಸಹನಾ ಮೂರ್ತಿ, ಗೌತಮನಿಗೆ ಸದಾ ವಿಧೇಯಳಾಗಿರುವವಳು. ಆ ಕಾರಣ ಇಲ್ಲಿ ಪುರಾಣ ಭಂಜನ ಕಾರ್ಯ ಸ್ತ್ರೀವಾದಿ ನೆಲೆಯಲ್ಲಿ ನಡೆದಿದೆ ಎಂದು ಹೇಳಲು ಬರುವುದಿಲ್ಲ. ಪಾತಿವ್ರತ್ಯತೆಯನ್ನು, ಅದರ ಪಾಲನೆಯ ರೀತಿನೀತಿಗಳನ್ನು, ಪಾತಿವ್ರತ್ಯದ ಶಕ್ತಿ ಮತ್ತು ಪರಿಣಾಮಗಳನ್ನು ಪುರಾಣ ಕಟ್ಟಿಕೊಟ್ಟ ಕಲ್ಪನೆಯ ಹಿನ್ನೆಲೆಯಲ್ಲಿಯೇ ವೈಭವೀಕರಿಸಿ ಕಾದಂಬರಿಯುದ್ದಕ್ಕೂ ಚಿತ್ರಿಸಿದ್ದಾರೆ. 'ಗೃಹಿಣಿಯ ಶಕ್ತಿ ಮತ್ತು ಅವಳ ಪಾತಿವ್ರತ್ಯದ ಶಕ್ತಿ', 'ಹೆಣ್ಣಿಗೆ ಪಾತಿವ್ರತ್ಯಕ್ಕಿಂತ ಹಿರಿದಾದ ಧರ್ಮವಿಲ್ಲ'– ಎಂಬುದನ್ನು ವೈಭವೀಕರಿಸಿ ಚಿತ್ರಿಸುವುದೇ ಈ ಕಾದಂಬರಿಯ ತಾತ್ವಿಕತೆಯಾಗಿದೆ.

ಗೃಹಿಣಿ ಮತ್ತು ಪತಿವ್ರತೆಯ ಸ್ತ್ರೀಮಾದರಿ ಪಾತ್ರಗಳು ನಮ್ಮ ಸಾಹಿತ್ಯ ಮತ್ತು ಸಂಸ್ಕೃತಿಯಲ್ಲಿ ಹಲವು ಕಲ್ಪನೆಗಳಿಂದ ಬೇರು ಬಿಟ್ಟಿವೆ. 21ನೆಯ ಶತಮಾನದ ಕಾಲಘಟ್ಟದಲ್ಲಿ ನಿಂತು ಇಂತಹ ಸ್ತ್ರೀ ಮಾದರಿ ಪಾತ್ರಗಳನ್ನು ವೈಭವೀಕರಿಸಿ ಮತ್ತು ಸಮರ್ಥಿಸಿ ರಾಧಾದೇವಿಯವರು ಕಾದಂಬರಿಯನ್ನು ರಚಿಸಿರುವುದು ಆಶ್ಚರ್ಯವೇ ಸರಿ. ಇಲ್ಲಿ ಪೂರ್ಣವಾಗಿ ಪುರಾಣವನ್ನು ಒಪ್ಪಲಾಗಿದೆ. ಅಹಲ್ಯೆಯ ಪತಿವ್ರತಾಧರ್ಮವನ್ನು ಪುರಾಣ ಮಾದರಿಯಲ್ಲಿ ಚಿತ್ರಿಸಲಾಗಿದೆ.

ಅಹಲ್ಯೆಯಂತಹ ಅಪ್ರತಿಮ ಸುಂದರಿಯ ಸೃಷ್ಟಿ ಏಕೆ ಆಯಿತು? ಎಂಬ ಹಿನ್ನೆಲೆಯನ್ನು ಕಾದಂಬರಿಯ ಆರಂಭದ ಹತ್ತು ಪುಟುಗಳಲ್ಲಿ ವಿವರಿಸಿದೆ. ದೇವಲೋಕದ ಊರ್ವಶಿ, ತಿಲೋತ್ತಮೆ ಈ ಚೆಲುವೆಯರ ಸೌಂದರ್ಯವನ್ನು ಮೀರಿಸುವಂತಹ, ತ್ರಿಲೋಕದಲ್ಲಿ ಪಂಚ ಪತಿವ್ರತೆಯರಲ್ಲಿ ಪ್ರಥಮ ಹೆಸರಾಗುವ, ಆಕೆಯ ಚೆಲುವಿನಂತೆ ಆಕೆಯ ಪಾತಿವ್ರತ್ಯವೂ ಹೆಸರಾಗುವಂತೆ ಸರಸ್ವತಿಯ ಇಚ್ಛೆಯಂತೆ ಮತ್ತು ಆಶೀರ್ವಾದದಂತೆ ಬ್ರಹ್ಮನ ಸೃಷ್ಟಿ ಅಹಲ್ಯೆಯಾಗಿದ್ದಾಳೆ. ಮುಂದಿನ ಕತೆಯೂ ಇದನ್ನೇ ಹೇಳುತ್ತದೆ.

ಇಲ್ಲಿ ಅಹಲ್ಯೆ ರಾಜ ವಿಂಧ್ಯವರ್ಮನ ಮಗಳಾಗಿ ಜನಿಸಿದವಳು. ಅಪ್ರತಿಮವಾದ ಇವಳ ಚೆಲುವು ದೇಶ ದೇಶಗಳಲ್ಲಿಯೂ ಪ್ರಸಿದ್ಧವಾಗಿದೆ. ಇವಳ ಸ್ವಯಂವರದ ಪ್ರಸಂಗದ ಕಲ್ಪನೆ ಆಕರ್ಷಕವಾಗಿದೆ. ಗೌತಮನಿಗೆ ಅವಳು ದೊರಕಿದ ರೀತಿಯ ಕತೆ ಇದು. ಅಹಲ್ಯೆಯ ಸೌಂದರ್ಯಕ್ಕೆ ಮಾರುಹೋಗಿ

ಅಷ್ಟದಿಕ್ಪಾಲಕರು, ಇಂದ್ರ, ಅಗ್ನಿ, ಯಮ, ವರುಣ, ಋಷಿಗಳು, ಯೋಗಿಗಳು ಎಲ್ಲರೂ ಬಂದವರೇ. ಇವರಲ್ಲಿ ಯಾರಿಗೆ ಮದುವೆ ಮಾಡಿ ಕೊಡಬೇಕು ಎಂಬ ಸಮಾಲೋಚನೆಯ ಫಲವಾಗಿ ರಾಜ ವಿಂಧ್ಯವರ್ಮ ಎಲ್ಲರಿಗೂ ಒಂದು ಸ್ಪರ್ಧೆಯನ್ನು ಏರ್ಪಡಿಸುತ್ತಾನೆ. ಈ ಸ್ಪರ್ಧೆಯಲ್ಲಿ ಬುದ್ಧಿವಂತಿಕೆಯಿಂದ ಗೆದ್ದವನು ಅರವತ್ತು ವರ್ಷದ ವಯಸ್ಸಿನ ಗೌತಮ ಋಷಿ. ನಂತರ ಅಹಲ್ಯೆ ಗೌತಮನ ಆಶ್ರಮದಲ್ಲಿ ಬದುಕಬೇಕಾದ, ಬದಲಾಗಬೇಕಾದ, ಬದಲಾದ ದೃಶ್ಯಗಳನ್ನು ಚಿತ್ರಿಸಿದ್ದಾರೆ. ಈ ಎಲ್ಲಾ ದೃಶ್ಯಗಳಲ್ಲಿ, ಸಂದರ್ಭಗಳಲ್ಲಿ ಗೃಹಿಣಿ ಮತ್ತು ಪತಿವ್ರತೆಯ ವೈಭವೀಕರಣವೇ ಇದೆ.

ಹೆಣ್ಣಿನ ಬದುಕಿನಲ್ಲಿ ಹಲವು ಪುರುಷ ಸೂಚಿತ ಸಿದ್ಧ ಸ್ಥಿರಮಾದರಿಗಳಿವೆ. ಹೆಣ್ಣು ಗಂಡನ ಮನೆಗೆ ಹೋಗುವುದು. ಅಲ್ಲಿ ಗಂಡನ ಮನೆಗೆ ಹೊಂದಿಕೊಳ್ಳುವುದು, ಗಂಡನ ಆಸೆ–ಆಕಾಂಕ್ಷೆಗಳನ್ನು ಅನುಸರಿಸುವುದು, ಗಂಡನ ಆಜ್ಞಾನುವರ್ತಿಯಾಗಿ ನಡೆಯುವುದು, ಗಂಡನ ಶ್ರೇಯಸ್ಸು, ಅಭ್ಯುದಯದಲ್ಲಿ ತನ್ನ ಪಾತಿವ್ರತ್ಯದ ಪಾಲು ಹೆಚ್ಚಿದೆ– ಇಂತಹ ಹಲವು ಕಲ್ಪನೆಯ ನೆಲೆಯಲ್ಲಿ ಕಾದಂಬರಿಯ ಮುಂದಿನ ಕಥೆ ಬೆಳವಣಿಗೆಯಾಗಿದೆ.ಅಹಲ್ಯೆ ಅರಮನೆಯನ್ನು/ತವರಿನ ಮನೆಯನ್ನು ಬಿಟ್ಟು ಗೌತಮನ ಆಶ್ರಮಕ್ಕೆ ಹೋಗುವಾಗ ತಾಯಿ ಹೇಳುವ ಮಾತುಗಳು ಹೀಗಿವೆ: "…. ಕೊಟ್ಟ ಹೆಣ್ಣು ಕುಲಕ್ಕೆ ಹೊರಗು….. ಹೆಜ್ಜೆ ಹೆಜ್ಜೆಗೂ ಪತಿಯ ಅಪ್ಪಣೆಯಂತೆ ನಡೆ. ಪತಿಯ ಮನಸ್ಸಿಗೆ ಅಹಿತವಾಗುವಂತೆ ನಡೆಯಬೇಡ…… ಪತಿಯ ಮನಸ್ಸು ಸದಾ ಪ್ರಸನ್ನವಾಗುವಂತೆ ನೋಡಿಕೊ.

ಪತಿವ್ರತೆಯಾಗಿ ಬಾಳು. ಹೆಣ್ಣಿಗೆ ಪಾತಿವ್ರತ್ಯಕ್ಕಿಂತ ಹಿರಿದಾದ ಧರ್ಮವಿಲ್ಲ".[16] ತಾಯಿಯ ಈ ಮಾತುಗಳನ್ನು ನೆನೆದು ಅರಮನೆಯಲ್ಲಿ ಸುಖವಾಗಿ ಬೆಳೆದ ಅಹಲ್ಯೆ ಪತಿಭಕ್ತಿಯಿಂದ ಗೌತಮನ ಆಶ್ರಮಕ್ಕೆ ಹೊಂದಿಕೊಳ್ಳುವ ಕಾರ್ಯದಲ್ಲಿ ತೊಡಗುತ್ತಾಳೆ.ಬಹುಬೇಗನೆ ಹೊಂದಿಕೊಳ್ಳುತ್ತಾಳೆ. ಹಾಗೆ ಹೊಂದಿಸುವವಳು ಸಾವಿತ್ರಿ ಎಂಬ ಮತ್ತೊರ್ವ ಪತಿವ್ರತೆ. ಅಹಲ್ಯೆ ಹೊಂದಿಕೊಂಡರೂ ಅವಳ ಪತಿಭಕ್ತಿಯನ್ನು ಗೌತಮ ಮತ್ತೆ ಮತ್ತೆ ತನ್ನ ದಿವ್ಯಶಕ್ತಿಯಿಂದ ಪರೀಕ್ಷಿಸುತ್ತಿರುತ್ತಾನೆ. ಅದೇ ರೀತಿ ಮೊದಲ ಬಾರಿಗೆ ಅವಳ ಪತಿವ್ರತ ಧರ್ಮವನ್ನು ದಿವ್ಯದೃಷ್ಟಿಯಿಂದ ಅವಳ ಮನೋಮಂಡಲವನ್ನು ಪ್ರವೇಶಿಸಿ ಪರೀಕ್ಷಿಸಿ ಹೊರ ಬಂದಾಗ, ಅವಳ ತಲೆಯ ಮೇಲೆ ಪಾತಿವ್ರತ್ಯದ ಪ್ರಭಾವಲಯ ಬಂಗಾರದ ಉಂಗುರ ಮೂಡಿತ್ತು. ಇವೆಲ್ಲವುಗಳ ಜೊತೆಗೆ ಕಾದಂಬರಿಯಲ್ಲಿ ಗೃಹಿಣಿಯಾದ ಅಹಲ್ಯೆಯ ದಿನಚರಿ ಪುರುಷ ಪ್ರಧಾನ ಸೂಚಿತ ಹೆಣ್ಣಿನ ಗುಣಗಳು, ಹೆಣ್ಣಿನಿಂದ ಇರುವ ನಿರೀಕ್ಷೆಗಳು, ಹೆಣ್ಣಿನ ಬಗೆಗಿನ ಕಲ್ಪನೆಗಳು ಹೇಗೆಲ್ಲಾ ಇವೆ ಎಂಬುದನ್ನು ನೆನಪಿಸುತ್ತವೆ.

ಗಂಡನ ಊಟವಾದ ಮೇಲೆ ಹೆಂಡತಿ ಊಟ ಮಾಡಬೇಕು, ಗಂಡನ ಸೇವೆಯನ್ನೇ ಸದಾ ಧ್ಯಾನಿಸಬೇಕು. ಗಂಡನ ನಿರ್ಧಾರಗಳನ್ನು ಪ್ರಶ್ನಿಸುವಂತಿಲ್ಲ, ಗಂಡನ ಆಸೆ ಆಕಾಂಕ್ಷೆ ಮುಂದೆ ತನ್ನ ಆಸೆ ಆಕಾಂಕ್ಷೆ ಏನೂ ಅಲ್ಲ, ಏನೂ ಇಲ್ಲ ಎಂಬ ಭಾವನೆ – ಈ ರೀತಿಯ ಹಲವು ವಿಚಾರಗಳು ಕಾದಂಬರಿಯಲ್ಲಿ ಚಿತ್ರಿತವಾಗಿವೆ. "ಕಾಯಕಷ್ಟದಿಂದ ಕೂಡಿದ ಈ ಶ್ರಮಜೀವನಕ್ಕೆ ಅಹಲ್ಯೆ ತುಂಬಾ ಹೊಂದಿ ಕೊಂಡಳು" ಎಂದು ಲೇಖಕಿ ಚಿತ್ರಿಸಿ "ಆಶ್ಚರ್ಯದ ವಿಷಯ ಎಂದರೆ ಅಹಲ್ಯೆ ಯಾವ ಕೆಲಸದಲ್ಲಿ ತೊಡಗಿದ್ದರೂ ಅಹಲ್ಯೆಯ ಮನ ಅಹರ್ನಿಶಿ ಪತಿಯ ಕಲ್ಯಾಣಕ್ಕಾಗಿ ಹಂಬಲಿಸುತ್ತಿತ್ತು" ಎನ್ನುತ್ತಾರೆ. ಪತಿಸೇವೆಯೇ ತನ್ನ ಬದುಕಿನ ದೊಡ್ಡ ಕರ್ತವ್ಯವೆಂದು ಭಾವಿಸುವವಳು ರಾಧಾದೇವಿಯವರ ಅಹಲ್ಯೆ.

ಗೌತಮ ಒಮ್ಮೆ ದೇವತೆಗಳ ಕಲ್ಯಾಣಕ್ಕಾಗಿ, ಅವರ ಬಲವರ್ಧನೆಗಾಗಿ ಒಂದು ವರ್ಷದವರೆಗೆ ಉಗ್ರ ತಪಸ್ಸಿನಲ್ಲಿ ತೊಡುಗುತ್ತಾನೆ. ಈ ತಪಸ್ಸು ರಕ್ಷಿಸುವವಳು ಅಹಲ್ಯೆ. ಅದನ್ನು ಕಾದಂಬರಿಯಲ್ಲಿ ಎರಡು ಮೂರು ಪುಟಗಳಷ್ಟು ವಿವರಿಸಿ ಅವಳ ಪಾತಿವ್ರತೆಯ ಮಹಿಮೆಯನ್ನು ಚಿತ್ರಿಸಿದ್ದಾರೆ. ಅಹಲ್ಯೆಗೆ ಮಾತ್ರ ಈ ತಪಸ್ಸನ್ನು ರಕ್ಷಿಸುವ ಶಕ್ತಿ ಇದೆ. ಕಾರಣ ಪತಿವ್ರತೆಯರಿಗೆ ಮಾತ್ರ ಇದನ್ನು ರಕ್ಷಿಸುವ ಶಕ್ತಿ ಬರುವುದು. ಅಹಲ್ಯೆ ಇಷ್ಟು ವರ್ಷಗಳಿಂದ ತನ್ನ ಪತಿವ್ರತೆಯಾಗಿ ಪತಿಸೇವೆಯಿಂದ ಸಾಕಷ್ಟು ವಿಶೇಷವಾದ ಶಕ್ತಿಯನ್ನು ಪಡೆದಿದ್ದಾಳೆ. ಈ ಶಕ್ತಿ ಕೂಡ ಅವಳ ಪತಿಯಾದ ಗೌತಮನನ್ನು ರಕ್ಷಿಸುವುದಕ್ಕೆ, ಕಾಪಾಡುವುದಕ್ಕೆ ಮೀಸಲಾಗಿದೆ. ಇಂತಹ ಕಲ್ಪನೆಗಳು ಪುರಾಣದಿಂದ ನೇರವಾಗಿ ಬಂದ ಹೆಣ್ಣನ್ನು ಕುರಿತ ಕಲ್ಪನೆಗಳು. ಪತಿವ್ರತೆಯರಿಗೆ ಮಾತ್ರ ದೇವರನ್ನು, ಯಮನನ್ನು, ರಾಕ್ಷಸರನ್ನು ಮುಂತಾದ ಎಲ್ಲಾ ಮೂಲಗಳ ಶಕ್ತಿಯನ್ನು ಎದುರಿಸುವ ಶಕ್ತಿಯಿದೆ. ಅತ್ರಿ ಋಷಿಗಳ ಪತ್ನಿ ತನ್ನ ಪತಿಭಕ್ತಿ ಪಾತಿವ್ರತ್ಯದಿಂದ ತ್ರಿಮೂರ್ತಿಗಳನ್ನೇ ಚಿಕ್ಕ ಶಿಶುಗಳಾಗಿ ಮಾಡಿ ಹಾಲೂಡಿಸಿದ ಕತೆಗಳನ್ನು ಈ ಅರ್ಥದಲ್ಲಿಯೇ ಪುರಾಣದಲ್ಲಿ ಕಟ್ಟಲಾಗಿದೆ. ಇದು ಪುರುಷ ಪ್ರಧಾನ ಸಮಾಜದ ಹುನ್ನಾರವೇ ಸರಿ. ಲೇಖಕಿ ಈ ಹುನ್ನಾರವನ್ನು ಪ್ರಶ್ನಿಸದೇ/ಭಂಜಿಸದೆ ವೈಭವೀಕರಿಸಿ ಪತಿವ್ರತಾ ಧರ್ಮದಿಂದ ಅಹಲ್ಯೆ ನಮಗೆ ಮಾದರಿಯಾಗಬೇಕೆಂದು ಹೇಳಲು ಹೊರಿಟ್ಟಿದ್ದಾರೆ.

ಈ ಕಾದಂಬರಿಯಲ್ಲಿ ಅಹಲ್ಯೆಯು ಪುರಾಣ ಹೇಳುವ ಸ್ತ್ರೀ ಮಾದರಿಗಳಾದ ಕಾರ್ಯೇಷುದಾಸಿ, ರೂಪೇಷು ಲಕ್ಷ್ಮಿ, ಕಾಯಾ ವಾಚಾ ಮನಸಾ ನಡೆಯುವವಳು, ಕ್ಷಮಯಾ ಧರಿತ್ರಿ, ಭೋಜ್ಯೇಷು ಮಾತಾ, ಕರಣೇಷು ಮಂತ್ರಿ, ಶಯನೇಷು ವೇಶ್ಯಾಯಾಗಿ ಚಿತ್ರಿತವಾಗುತ್ತಾಳೆ. ಪತಿವ್ರತಾ ಧರ್ಮವೆಂಬುದು ಇದೆಲ್ಲವನ್ನು ಒಳಗೊಂಡಿರುವುದು ಎಂಬುದನ್ನು ಇದು ಪರೋಕ್ಷವಾಗಿ ನೆನಪು ಮಾಡಿ ಇದೆಲ್ಲವನ್ನು ಅನುಸರಿದವಳು ಅಹಲ್ಯೆ ಎಂದು ಅವಳ ವ್ಯಕ್ತಿತ್ವವನ್ನು ಬಿಂಬಿಸಿದ್ದಾರೆ. ಈ ಶಕ್ತಿ ಪತಿಯಾದ ಗೌತಮರನ್ನು ಸದಾ ರಕ್ಷಿಸುತ್ತಿದೆ.ಗೌತಮರ ತಪಸ್ಸಿಗೆ ಬಲವನ್ನು ತಂದುಕೊಡುತ್ತಿದೆ.ನಂತರದಲ್ಲಿ ಗೌತಮರ ತಪಸ್ಸನ್ನು ಭಂಗಗೊಳಿಸಲು ಸ್ವತಹ ವಿಷ್ಣುವೇ, ದೇವತೆಗಳೇ ಅಸಹಾಯಕರಾಗಿ ಅವಳಿಗೆ ಶರಣಾಗಿ, ಅವಳ ಸಹಾಯದಿಂದ ಗೌತಮರ ತಪಸ್ಸನ್ನು ಕೆಡಿಸುವ ದೃಶ್ಯಗಳು ಇವೆ.

ಅಹಲ್ಯೆಯ ಪತಿವ್ರತಾ ಧರ್ಮಕ್ಕೆ ಮನಸೋತ ಗೌತಮ ಅವಳಿಗೆ ನೀಡುವ ಶ್ರೇಷ್ಠವಾದ ಕೊಡುಗೆ ಬಗ್ಗೆ ಯೋಚಿಸಿ "ನಿನ್ನಂತಹ ಪತ್ನಿಯನ್ನು ಇದುವರೆಗೆ ಋಷಿಪತ್ನಿಯಾಗಿ ತೊಳಲಾಡಿಸಿದ್ದು ಸಾಕು. ಇಂದ್ರಾಣಿಯಾಗಲು ಅರ್ಹತೆಯುಳ್ಳ ಸೌಂದರ್ಯ ನಿನ್ನದು. ನಾನು ಇಂದ್ರ ಪಟ್ಟಕ್ಕಾಗಿ ತಪಸ್ಸಿಗೆ ಕೂಡುವುದು ನಿಶ್ಚಯ ಅಹಲ್ಯೆ"[17] ಎಂದು ತಪಸ್ಸಿಗೆ ಕೂರುತ್ತಾನೆ. ಇಂದ್ರ ಪಟ್ಟಕ್ಕಾಗಿ ಮಾಡುತ್ತಿರುವ ಈ ಉಗ್ರ ತಪಸ್ಸನ್ನು ಯಾರು ಕೆಡಿಸಲು ಸಾಧ್ಯವಾಗುವುದಿಲ್ಲ. ಕಾರಣ 'ಅಹಲ್ಯೆಯ ಪಾತಿವ್ರತ್ಯ ಪ್ರಭಾವ'. ಶ್ರೀ ಮಹಾವಿಷ್ಣುವಿನ ಸಲಹೆಯಂತೆ ಎಲ್ಲರೂ ಅಹಲ್ಯೆಗೆ ಶರಣು ಹೋಗಿ, ಗೌತಮನ ಆಸೆ ಲೋಕ ನೀತಿಗೆ ಹೇಗೆ ವಿರುದ್ಧವಾಗಿದೆ ಮತ್ತು ಅದು ಅಸಾಧ್ಯವಾದುದು ಎಂಬುದನ್ನು ತಿಳಿಸಿಕೊಡುತ್ತಾರೆ ಹಾಗೂ ಈ ತಪಸ್ಸಿನಿಂದ ಗೌತಮರನ್ನು ವಿಮುಖಗೊಳಿಸುವುದಕ್ಕೆ ಇರುವುದು ಒಂದೇ ಮಾರ್ಗ, ಅದು ಅಹಲ್ಯೆಯ ಮೋಹದಿಂದ ಕೂಡಿರುವ ಅವರ ಮನಸ್ಸನ್ನು ಮುಕ್ತಗೊಳಿಸುವುದು. ಪತಿಯ ಹಿತವನ್ನು ಕಾಯಲು, ಅವರನ್ನು ಉಳಿಸಿಕೊಳ್ಳಲು ಅನಿವಾರ್ಯವಾಗಿ ತಾನು ಗೌತಮರ ಕಣ್ಣೆದುರಿಗೆ ತಪ್ಪಿತಸ್ಥಳು ಎನ್ನುವಂತೆ ಬಿಂಬಿಸಿಕೊಳ್ಳುತ್ತಾಳೆ. ಇಲ್ಲಿಯೂ ಅವಳ ವ್ಯಕ್ತಿತ್ವಕ್ಕೆ ಕುಂದು ಬಾರದಂತೆ ಎಚ್ಚರಿಕೆ ವಹಿಸಿದ್ದಾರೆ ಲೇಖಕಿ. ಇತರ ಕಥೆಗಳಂತೆ ಅಹಲ್ಯೆ ಇಲ್ಲಿ

ಇಂದ್ರನನ್ನು ಬಯಸಿದವಳಲ್ಲ, ಇಂದ್ರನನ್ನು ಸೇರಿದವಳಲ್ಲ. ತನ್ನ ಪತಿಯನ್ನು ಉಳಿಸಿಕೊಳ್ಳುವುದಕ್ಕೆ ಇಂದ್ರನೊಂದಿಗೆ ಪತಿವ್ರತಾ ಧರ್ಮವನ್ನು ಮೀರದಂತೆ ನಾಟಕವನ್ನು ಮಾಡಿದವಳಷ್ಟೆ. ಈ ಸೂಕ್ಷ್ಮವಾದ ಚಿತ್ರಣದಿಂದ ಅಹಲ್ಯೆಯ ವ್ಯಕ್ತಿತ್ವವನ್ನು ವೈಭವೀಕರಿಸುವ ಪ್ರಯತ್ನ ಲೇಖಕಿ ರಾಧಾದೇವಿಯವರದು.

ಸಾಹಿತ್ಯದಲ್ಲಿ ಲೇಖಕ/ಲೇಖಕಿಯರ ಪ್ರಾಮಾಣಿಕ ಅನುಭವದ ಅಭಿವ್ಯಕ್ತಿ ಇರಬೇಕು. ಈ ಅಭಿವ್ಯಕ್ತಿ ಕಲಾತ್ಮಕವಾಗಿ ಮತ್ತು ಮಹತ್ವದ ತಾತ್ವಿಕತೆಯೊಂದಿಗೆ ಕೂಡಿದ್ದರೆ ಇನ್ನೂ ಉತ್ತಮವೇ. ಮೇಲೆ ಚರ್ಚಿಸಿದ ಮೂರು ಕಾದಂಬರಿಗಳಲ್ಲಿ ಲೇಖಕಿಯರ ಭಿನ್ನಭಿನ್ನ ತಾತ್ವಿಕ ನಿಲುವುಗಳು ನಮಗೆ ಗೋಚರವಾಗುತ್ತವೆ. ಅವುಗಳಲ್ಲಿ ಪ್ರಮುಖವಾಗಿ ಶಕುಂತಳಾಭಟ್ ಮತ್ತು ಪ್ರಭಾವತಿಯವರ ಅಹಲ್ಯೆ ಸತಿಧರ್ಮದಂತೆ ಪತಿಧರ್ಮವನ್ನು ಬಯಸುವವಳು. ತನಗೂ ಒಂದು ಅಸ್ತಿತ್ವವಿದೆ ಮತ್ತು ತಾನು ಪುರುಷರಂತೆ ಆತ್ಮವಿಕಾಸದ ಕಡೆ ನಡೆಯಬೇಕು ಎಂದು ಬಯಸುವವಳು. ಇಲ್ಲಿ ನಿಜವಾದ ಅರ್ಥದಲ್ಲಿ ಸ್ತ್ರೀವಾದಿ ಚಿಂತನೆ ಮೂಡಿದೆ.ಆದರೆ ರಾಧಾದೇವಿಯವರ ಅಹಲ್ಯೆ ಈ ಮಾದರಿಯಲ್ಲಿ ಇಲ್ಲ. ರಾಧಾದೇವಿಯವರ 'ಅಹಲ್ಯೆ'ಕಾದಂಬರಿಯಲ್ಲಿ ಪುರುಷ ದೃಷ್ಟಿಕೋನದಿಂದ ವ್ಯಕ್ತವಾದ ಸ್ತ್ರೀವಾದವಿದೆ. ಇಲ್ಲಿನ ಅಹಲ್ಯೆ ಲಿಂಗಾಧಾರಿತ ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ಮತ್ತು ತಾರತಮ್ಯದ ನೆಲೆಯಲ್ಲಿ ಬೆಳೆದ ಸ್ತ್ರೀಪಾತ್ರವಾಗಿದ್ದಾಳೆ. 21ನೆಯ ಶತಮಾನದ ಸಮಾಜ ಮತ್ತು ಕುಟುಂಬ ವ್ಯವಸ್ಥೆಯಲ್ಲಿ ಒಂದು ಹೆಣ್ಣು ಹೇಗೆ ಬದುಕಬೇಕು ಎಂಬುದನ್ನು ಅಹಲ್ಯೆ ಪಾತ್ರ ಮುಖೇನ ಈ ಕಾದಂಬರಿಯಲ್ಲಿ ಹೇಳ ಹೊರಟಿರುವುದು ಸೋಜಿಗವೆ. ಈ ಕಾದಂಬರಿಯಲ್ಲಿನ ಪುರುಷರ ಕಣ್ಣಿನಲ್ಲಿರುವ ಸಮಾಜ ಮತ್ತು ಕುಟುಂಬದ ಕಲ್ಪನೆ, ಅದಕ್ಕೆ ಪೂರಕವಾಗಿ ಹೊಂದಾಣಿಕೆಯಿಂದ ಹೋಗುವ ಆದರ್ಶ ಹೆಣ್ಣು ಅಹಲ್ಯೆಯಾಗಿದ್ದಾಳೆ. ಸಮಾಜ ಮತ್ತು ಕುಟುಂಬದಲ್ಲಿ ಆದರ್ಶ ಹೆಣ್ಣಾಗಿ, ತ್ಯಾಗಿಯಾಗಿ, ಗೃಹಿಣಿಯಾಗಿ, ಪತಿವ್ರತೆಯಾಗಿ, ಗಂಡನ ಯಶಸ್ಸಿಗೆ ಕಾರಣಕರ್ತಳಾಗಿ, ಗಂಡನಿಗೆ ದಾಸಿ, ವೇಶ್ಯೆ, ಮಂತ್ರಿ, ಕ್ಷಮ ಧರಿತ್ರೀ – ಹೀಗೆ ಹಲವು ಪಾತ್ರಗಳನ್ನು ನಿರ್ವಹಿಸುವ ಅಹಲ್ಯೆ ಇಲ್ಲಿ ಇದ್ದಾಳೆ. ಚಾರಿತ್ರ್ಯ ಮತ್ತು ಶೀಲ ಇವಳಿಗೆ ಭೂಷಣವಾಗಿದೆ. ರಾಧಾದೇವಿಯವರಿಗೆ ಪುರುಷ ಪ್ರಧಾನ ಸಮಾಜದ ಧೋರಣೆ–ಮನೋಭಾವಗಳನ್ನು ಮೀರಲು ಸಾಧ್ಯವಾಗಿಲ್ಲ.

**ಕೊನೆ ಟಿಪ್ಪಣಿಗಳು**

1. ಶಕುಂತಳಾಭಟ್ ಎಚ್. ಕಾಡಬೆಳದಿಂಗಳು, ಪು.ಸಂ.13
2. ಅದೇ, ಪು.ಸಂ.23
3. ಅದೇ, 56
4. ಅದೇ, 46
5. ಅದೇ, ಪು.ಸಂ. 57
6. ಅದೇ, 60
7. ಅದೇ, ಪು.ಸಂ. 61
8. ಅದೇ
9. ಅದೇ

10. ಪ್ರಭಾವತಿ, ಎಸ್. ವಿ. ಅಹಲ್ಯೆ, ಪು.ಸಂ. 9
11. ಅದೇ, ಪು.ಸಂ 36
12. ಅದೇ, ಪು.ಸಂ. 72
13. ಅದೇ, ಪು.ಸಂ. 85
14. ಅದೇ, ಪು.ಸಂ.88
15. ಅದೇ ಪು.ಸಂ. 95
16. ಅಹಲ್ಯೆ, ಹೆಚ್.ಸಿ. ರಾಧಾದೇವಿ, ಪು.ಸಂ. 18
17. ಅದೇ, ಪು.ಸಂ. 61

**ಪರಾಮರ್ಶನ ಗ್ರಂಥಗಳು**


- ಶಕುಂತಳಾ ಭಟ್. ಎಚ್. (2003). ಕಾಡಬೆಳದಿಂಗಳು. ದಿಗಂತ ಸ್ಟೇಶನರ್ಸ್ ಅಂಡ್ ಪಬ್ಲಿಕೇಷನ್ಸ್, ಮಂಗಳೂರು.
- ಪ್ರಭಾವತಿ. ಎಸ್. ವಿ. (2009). ಅಹಲ್ಯಾ. ಎಚ್.ವಿ.ಎಸ್. ಪಬ್ಲಿಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು.
- ರಾಧಾದೇವಿ. ಎಚ್.ಜಿ. (2007). ಅಹಲ್ಯೆ. ಪಾಂಚಜನ್ಯ ಪಬ್ಲಿಕೇಷನ್ಸ್, ಬೆಂಗಳೂರು.